ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಜೂನ್ 22, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 39 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999




# ದೇವನಗರಿಯಲ್ಲಿ ಯೋಗ ಸಂಭ್ರಮ

## ಮಕ್ಕಳಿಗೆ ಯೋಗ ಕಲಿಸುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಕರೆ

ದಾವಣಗೆರೆ, ಜು. 21- ಜಿಲ್ಲಾದ್ಯಂತ ಬುಧವಾರ 9ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಲ್ಲಾ ವಯೋಮಾನದವರೂ ಯೋಗ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಇಲ್ಲಿನ ದೇವರಾಜ್ ಅರಸ್ ಬಡಾವಣೆಯಲ್ಲಿರುವ ಈಜುಕೊಳ ಬಳಿಯ ಮೈದಾನದಲ್ಲಿ ಜಿಲ್ಲಾಡಳಿತ ಹಾಗೂ ವಿವಿಧ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಯೋಗ ಗುರು ವೈದ್ಯ ಶ್ರೀ ಚನ್ನಬಸವ ಸ್ವಾಮೀಜಿ ನೇತೃತ್ವದಲ್ಲಿ 40 ನಿಮಿಷಗಳ ಕಾಲ ಯೋಗಾಸನ ಹೇಳಿಕೊಟ್ಟರು.

ಸಂಸದ ಜಿ.ಎಂ. ಸಿದ್ದೇಶ್ವರ, ಶ್ರೀಮತಿ ಗಾಯತ್ರಿ ಸಿದ್ದೇಶ್ವರ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿ.ಪಂ. ಸಿಇಒ ಸುರೇಶ್ ಕೆ. ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕೆ. ಅರುಣ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್, ಆಯುಷ್ ಇಲಾಖೆ ಜಿಲ್ಲಾಧಿಕಾರಿ ಡಾ. ಶಂಕರಗೌಡ ಸೇರಿದಂತೆ ಹಲವರು ವೇದಿಕೆ ಮೇಲೆ ಯೋಗಾಭ್ಯಾಸ ಮಾಡಿದರೆ, ವೇದಿಕೆ ಮುಂಭಾಗ ಸಾವಿರಾರು ಮಕ್ಕಳು, ಯೋಗ ಪಟುಗಳು ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಮಕ್ಕಳಿಗೆ (2ನೇ ಪುಟಕ್ಕೆ)



ಯೋಗ ದಿನದ ಕಾರ್ಯಕ್ರಮದಲ್ಲಿ ಸಂಸದ ಸಿದ್ದೇಶ್ವರ, ಜಿಲ್ಲಾಧಿಕಾರಿ ಹಾಗೂ ವಿವಿಧ ಅಧಿಕಾರಿಗಳು



ದಾವಣಗೆರೆ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಯೋಗ ನಿರತ ವಿದ್ಯಾರ್ಥಿಗಳು

### ಯೋಗಕ್ಕೆ ಯೋಗ್ಯರಾಗಬೇಕಾದರೆ ಪರಿಸರ ಉಳಿಸಿ

**ವೈದ್ಯ ಶ್ರೀ ಚನ್ನಬಸವ ಸ್ವಾಮೀಜಿ**

ದಾವಣಗೆರೆ, ಜು. 21- ಯೋಗಕ್ಕೆ ಯೋಗ್ಯರಾಗಬೇಕಾದರೆ ಗಿಡ ಮರಗಳನ್ನು ಬೆಳೆಸಿ, ಪರಿಸರ ಉಳಿಸಿ ಎಂದು ಯೋಗ ಗುರು, ವೈದ್ಯ ಶ್ರೀ ಚನ್ನಬಸವ ಸ್ವಾಮೀಜಿ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಯೋಗಾಭ್ಯಾಸ ನಡೆಸಿಕೊಟ್ಟ ಅವರು, ಯೋಗಪಟುಗಳನ್ನುದ್ದೇಶಿಸಿ ಮಾತನಾಡುತ್ತಾ, ಮುಂದಿನ ಪೀಳಿಗೆಗೆ ಉತ್ತಮ ಗಾಳಿ, ನೀರು, ಪರಿಸರ ನೀಡಬೇಕಾದ ಕರ್ತವ್ಯ ನಮ್ಮದು ಎಂದು ಹೇಳಿದರು.

ಪ್ರಕೃತಿಯನ್ನು ಚೆನ್ನಾಗಿಟ್ಟುಕೊಂಡರೆ ಭಾರತವನ್ನು ಚೆನ್ನಾಗಿಟ್ಟುಕೊಂಡಂತೆ. ಆ ಮೂಲಕ ಭಾರತವನ್ನು ಪ್ರಾಕೃತಿಕ ಶ್ರೀಮಂತ ದೇಶವನ್ನಾಗಿ ಮಾಡೋಣ ಎಂದು ಹೇಳಿದರು. ವಿಶ್ವಕ್ಕೆ ಶಾಂತಿ ಉಣಬಡಿಸಿದ ದೇಶ ನಮ್ಮದು. ಭಾರತ ಅಧ್ಯಾತ್ಮಿಕ, ಭಾವೈಕ್ಯತೆಯಿಂದ ಕೂಡಿದ ದೇಶ. ಬೇರೆ ದೇಶಗಳು ನಾಶವಾದರೆ ಅಂತಹ ಮತ್ತೊಂದು ದೇಶವನ್ನು ಸೃಷ್ಟಿಸಬಹುದು. (2ನೇ ಪುಟಕ್ಕೆ)

# ಸಂಯಮದ ಪ್ರತಿರೋಧ ಯಶಸ್ಸಿಗೆ ಸೂತ್ರ

## ಚಾರ್ಟರ್ಡ್ ಅಕೌಂಟೆಂಟ್ಸ್ ಭವನ ಉದ್ಘಾಟನೆಯಲ್ಲಿ ಐ.ಡಿ.ಬಿ.ಐ. ಅಧ್ಯಕ್ಷ ಮನೋಹರನ್

ದಾವಣಗೆರೆ, ಜೂ. 21 - ವ್ಯಕ್ತಿಗಳ ಜೀವನ ತಾತ್ಕಾಲಿಕ. ಆದರೆ, ಅವರು ಮಾಡುವ ಸಾಧನೆಗಳು ಹಾಗೂ ನಿರ್ಮಿಸುವ ಸಂಸ್ಥೆಗಳು ಶಾಶ್ವತ ಎಂದು ಐ.ಡಿ.ಬಿ.ಐ. ಬ್ಯಾಂಕ್ ಅಧ್ಯಕ್ಷ ಹಾಗೂ ಪದ್ಮಶ್ರೀ ಪುರಸ್ಕೃತ ಟಿ.ಎನ್. ಮನೋಹರನ್ ಅಭಿಪ್ರಾಯ ಪಟ್ಟರು.

ದಾವಣಗೆರೆ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್ ವತಿಯಿಂದ ನಗರದ ಪಿ.ಬಿ. ರಸ್ತೆಯಲ್ಲಿ ನಿರ್ಮಿಸಲಾಗಿರುವ ಚಾರ್ಟರ್ಡ್ ಅಕೌಂಟೆಂಟ್ಸ್ ಭವನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

2009ರಲ್ಲಿ ಆಂಧ್ರ ಪ್ರದೇಶದ ಸತ್ಯಂ ಕಂಪ್ಯೂಟರ್ ಸರ್ವೀಸಸ್ ಕಂಪನಿ ಹಗರಣದಲ್ಲಿ ಸಿಲುಕಿ ಸಂಕಷ್ಟ ಎದುರಿಸುತ್ತಿತ್ತು. ಕಂಪನಿಯ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರ ತಾತ್ಕಾಲಿಕ ಮಂಡಳಿ ರಚಿಸಿ, ನನ್ನನ್ನು ಅದಕ್ಕೆ ನೇಮಿಸಿತ್ತು. ಆದರೆ, ಸತ್ಯಂ ತೀವ್ರ ಸಂಕಷ್ಟದಲ್ಲಿದೆ, ಮಂಡಳಿಯೂ ತಾತ್ಕಾಲಿಕವಾಗಿದೆ. ಹೀಗಿರುವಾಗ ಸಮಸ್ಯೆ (2ನೇ ಪುಟಕ್ಕೆ)




### 103ರವರೆಗೆ ಎಸ್ಸೆಸ್ ಶಾಸಕರಾಗಲಿ, ಸಿದ್ದೇಶ್ವರ ಗೆಲ್ಲಲಿ

**ಅಥಣಿ ವೀರಣ್ಣ ಆಶಯ**

ಮಹಾರಾಷ್ಟ್ರದಲ್ಲಿ 102 ವರ್ಷದವರು ಶಾಸಕರಾಗಿರುವುದು ದಾಖಲೆಯಾಗಿದೆ. ಶಾಮನೂರು ಶಿವಶಂಕರಪ್ಪ ಅವರು 103ರ ವಯಸ್ಸಿನವರೆಗೂ ಶಾಸಕರಾಗಲಿ ಎಂದು ಲೆಕ್ಕಪರಿಶೋಧಕ ಅಥಣಿ ವೀರಣ್ಣ ಹಾರೈಸಿದ್ದಾರೆ. ಈಗ ಶಾಮನೂರು ಶಿವಶಂಕರಪ್ಪ ಅವರಿಗೆ 93 ವರ್ಷ ವಯಸ್ಸಾಗಿದೆ. ಮುಂದಿನ ಅವಧಿಗೂ ಚುನಾವಣೆಗೆ ನಿಲ್ಲುವುದಾಗಿ ಹೇಳಿದ್ದಾರೆ. ಆಗ ಅವರು 103 ವರ್ಷಗಳವರೆಗೂ ಶಾಸಕರಾಗಬಹುದು ಎಂದರು.

ಈ ಬಗ್ಗೆ ಅಥಣಿ ವೀರಣ್ಣ ಅವರು ವೇದಿಕೆ ಮೇಲಿದ್ದ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಅಭಿಪ್ರಾಯ ಕೇಳಿದರು. ಅವರು 103ರಲ್ಲೂ ಚುನಾವಣೆಗೆ ನಿಲ್ಲಲಿ ಎಂದು ಸಂಸದರು ಪ್ರತಿಕ್ರಿಯಿಸಿದರು. ಸಿದ್ದೇಶ್ವರ ನನ್ನ ಅಳಿಯ, ಅವರಿಗೆ ಚುನಾವಣಾ ಫಂಡ್ ಕೊಡುತ್ತೇನೆ ಎಂದು ಶಿವಶಂಕರಪ್ಪ ಹೇಳಿದ್ದಾರೆ. ಅದರಂತೆ ಶಿವಶಂಕರಪ್ಪನವರ ಫಂಡ್ ಹಾಗೂ ಆಶೀರ್ವಾದ ಪಡೆದು, ಸಿದ್ದೇಶ್ವರ ಐದನೇ ಬಾರಿ ಸಂಸದರಾಗಲಿ ಎಂದೂ ಅಥಣಿ ವೀರಣ್ಣ ಹೇಳಿದರು. ಈ ಮಾತಿಗೆ ಶಾಸಕ ಶಿವಶಂಕರಪ್ಪ ಮುಗುಳ್ನಕ್ಕರು.

# ಕೇಂದ್ರ ಅಕ್ಕಿ ಕೊಡದಿದ್ದರೆ ಅನ್ನಭಾಗ್ಯ ತಡ : ಸಿದ್ದರಾಮಯ್ಯ

ನವದೆಹಲಿ, ಜೂ. 21 – ಕೇಂದ್ರ ಸರ್ಕಾರ ಅಕ್ಕಿ ಬಿಡುಗಡೆ ಮಾಡದಿದ್ದರೆ ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ಪೂರೈಸುವುದು ತಡವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಬಳಿ 7 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಇದೆ. ಆದರೂ, ರಾಜ್ಯಕ್ಕೆ ಮೊದಲು ಅಕ್ಕಿ ಪೂರೈಕೆ ಮಾಡುತ್ತೇವೆ ಎಂದು ಹೇಳಿ ನಂತರ ನಿರಾಕರಿಸಲಾಗಿದೆ ಎಂದು ಟೀಕಿಸಿದರು.

ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ಮೊದಲು ಅಕ್ಕಿ ಪೂರೈಸುವುದಾಗಿ ಹೇಳಿ ನಂತರ ನಿರಾಕರಿಸುವುದಾದರೆ, ಕೇಂದ್ರ ಸರ್ಕಾರದ ಅದಕ್ಷತೆ ತೋರಿಸುತ್ತದೆ. ಅಕ್ಕಿ ಪೂರೈಸುವುದಾಗಿ ಹೇಳಿದ ಅಧಿಕಾರಿಗಳೇನು ಛಪ್ರಾಸಿಗಳಲ್ಲ. ಕೇಂದ್ರ ಸರ್ಕಾರ ಈ ವಿಷಯದಲ್ಲಿ ರಾಜಕೀಯ ಮಾಡುತ್ತಿದೆ ಎಂದು ಹೇಳಿದ್ದಾರೆ.

ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸಲು ಪ್ರಯತ್ನ ನಡೆದಿದೆ. ಛತ್ತೀಸ್‌ಘಡ ಮಾತ್ರ 1 ಲಕ್ಷ ಟನ್ ಅಕ್ಕಿ ಪೂರೈಸುವುದಾಗಿ ತಿಳಿಸಿದೆ. ತೆಲಂಗಾಣ ಕೇವಲ ಭತ್ತ ಮಾತ್ರ ಪೂರೈಸಲು (2ನೇ ಪುಟಕ್ಕೆ)

## ಸಂಚಾರ ದಟ್ಟಣೆ ವೇಳೆ ಲಾರಿಗಳ ನಿರ್ಬಂಧ : ಎಸ್ಪಿ

ದಾವಣಗೆರೆ, ಜೂ. 21 – ಸಂಚಾರ ದಟ್ಟಣೆ ಹೆಚ್ಚಾಗಿರುವ ವೇಳೆ ನಗರದ ಕೆಲ ತಾಣಗಳಲ್ಲಿ ಲಾರಿಗಳು ಸಂಚರಿಸದಂತೆ ನಿರ್ಬಂಧ ಹೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಆದೇಶಿಸಿದ್ದಾರೆ.

ಬೆಳಿಗ್ಗೆ 9ರಿಂದ 11 ಹಾಗೂ ಸಂಜೆ 4ರಿಂದ 6ರ ಅವಧಿಯಲ್ಲಿ ಲಾರಿಗಳ ಸಂಚಾರದ ಮೇಲೆ ನಿರ್ಬಂಧ ಹೇರಲಾಗಿದೆ. ಬಾಡಾ ಕ್ರಾಸ್, ಜಿಎಂಐಟಿ ಕಾಲೇಜು ರಸ್ತೆ, ಮಾಗಾನಹಳ್ಳಿ, ಶಾಮನೂರು ಅಂಡರ್‌ಪಾಸ್, ಲೋಕಿಕೆರೆ ಕ್ರಾಸ್ ಹಾಗೂ ಡಿಸಿಎಂ ಅಂಡರ್‌ಪಾಸ್‌ಗಳಲ್ಲಿ ಈ ಅವಧಿಯಲ್ಲಿ ಲಾರಿಗಳು ಸಂಚರಿಸುವಂತಿಲ್ಲ. ಆದರೆ, ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದ ಅನಿಲ ಹಾಗೂ ಪೆಟ್ರೋಲ್ ರೀತಿಯ ವಿಶೇಷ ವಾಹನಗಳಿಗೆ ಮಾತ್ರ ಈ ಅವಧಿಯಲ್ಲಿ ಅವಕಾಶ ಇರಲಿದೆ.

## ನಂದಿನಿ ಹಾಲಿನ ದರ ಹೆಚ್ಚಳಕ್ಕೆ ಪ್ರಸ್ತಾಪ

ಬೆಂಗಳೂರು, ಜೂ. 21 - ರಾಜ್ಯದ ಕರ್ನಾಟಕ ಹಾಲು ಒಕ್ಕೂಟದ ನಂದಿನಿ ಹಾಲಿನ ದರವನ್ನು 5 ರೂಪಾಯಿ ಹೆಚ್ಚಳ ಮಾಡಲು ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಈ ಮೂಲಕ ರೈತರಿಗೆ ನೀಡಲಾಗುವ ಪ್ರೋತ್ಸಾಹ ಧನವನ್ನು ಹೆಚ್ಚಳ ಮಾಡಲು ನಿರ್ಧರಿಸಲಾಗಿದೆ ಎಂದು ನೂತನ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್ ಹೇಳಿದರು. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರೈತರಿಗೆ ಒಳ್ಳೆಯದಾಗಬೇಕು (2ನೇ ಪುಟಕ್ಕೆ)

## ಕೆಎಂಎಫ್ ಅಧ್ಯಕ್ಷರಾಗಿ ಮಾಜಿ ಶಾಸಕ ಭೀಮಾನಾಯ್ಕ್ ಆಯ್ಕೆ

ಬೆಂಗಳೂರು, ಏ. 21 - ಕರ್ನಾಟಕ ಹಾಲು ಮಾರಾಟ ಮಹಾಮಂಡಳ ಅಧ್ಯಕ್ಷ ಸ್ಥಾನಕ್ಕೆ ಹಗರಿಬೊಮ್ಮನಹಳ್ಳಿಯ ಕಾಂಗ್ರೆಸ್ ಮಾಜಿ ಶಾಸಕ ಭೀಮಾನಾಯ್ಕ್ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಬಾಲಚಂದ್ರ ಜಾರಕಿಹೊಳಿ ಅವರ ಕೆಎಂಎಫ್ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಹೀಗಾಗಿ ಚುನಾವಣೆ ಮೂಲಕ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕಾಗಿ ಬೇರೆ ಯಾರು ನಾಮಪತ್ರ ಸಲ್ಲಿಸದಿರುವುದರಿಂದ ಭೀಮಾನಾಯ್ಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಪಿಎಸ್‌ಐ ಹಗರಣ : 52 ಆರೋಪಿತ ಅಭ್ಯರ್ಥಿಗಳು ಡಿಬಾರ್

ಬೆಂಗಳೂರು, ಏ. 21 - ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಹಗರಣದ 52 ಜನ ಆರೋಪಿತ ಅಭ್ಯರ್ಥಿಗಳನ್ನು ಪರೀಕ್ಷೆಯಿಂದ ಶಾಶ್ವತವಾಗಿ ಡಿಬಾರ್ ಮಾಡಿ ಪೊಲೀಸ್ ನೇಮಕಾತಿ ವಿಭಾಗ ಆದೇಶಿಸಿದೆ.

ಉಳಿದ ಅಭ್ಯರ್ಥಿಗಳಿಗೆ ನೌಕರಿ ಸಿಗುವ ವಿಶ್ವಾಸವಿದ್ದು, ಇದು ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬನೆಯಾಗಲಿದೆ. ಪಿಎಸ್‌ಐ ನೇಮಕಾತಿ ಲಿಖಿತ ಪರೀಕ್ಷೆಯಲ್ಲಿ ನಡೆದಿದ್ದ ಅಕ್ರಮದಲ್ಲಿ (2ನೇ ಪುಟಕ್ಕೆ)

ದ್ವಿತೀಯ ಪುಣ್ಯಸ್ಮರಣೆ



ದಿ. ಶ್ರೀ ಜಿ.ಟಿ. ಸುರೇಶ್‌ರವರು
ಆಡಿಟರ್, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ : ಶ್ರೀಮತಿ ಗೀತಾ ಮಗ: ಜಿ.ಎಸ್. ಸುನೀಲ್
ಮಗಳು : ಡಾ. ಜಿ.ಎಸ್. ಸುಪ್ರಿಯಾ, ಸಹೋದರ : ಜಿ.ಟಿ. ಗೋಪಾಲ






# ಅಕ್ಕಿ ಗ್ಯಾರಂಟಿ ಬಗ್ಗೆ ನೆಪ : ಕೇಂದ್ರದ ಮೇಲೆ ಗೂಬೆ

ಬೆಂಗಳೂರು, ಏ. 21 - ಅಕ್ಕಿ ಗ್ಯಾರಂಟಿ ಬಗ್ಗೆ ದಿನಕ್ಕೊಂದು ನೆಪ ಹೇಳುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು, ತಾನು ಎಸಗಿದ ಸ್ವಯಂಕೃತ ತಪ್ಪಿಗೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಾ ಜನರನ್ನು ಯಾಮಾರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೋ ಚುನಾವಣಾ ತಂತ್ರ ಗಾರರ ಮಾತು ಕೇಳಿಕೊಂಡು ಗ್ಯಾರಂಟಿ ಘೋಷಣೆ ಮಾಡಿದಾಗ, ಯೋಜನೆ ಜಾರಿಗೆ ಅಗತ್ಯವಾದ ಸಿದ್ಧತೆ ಮಾಡಿಕೊಳ್ಳಬೇಕಿತ್ತು ಎಂದರು.

ಅಕ್ಕಿ ಗ್ಯಾರಂಟಿ ಬಗ್ಗೆ ಇವರೇನು ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿದ್ರಾ? ಪೊಳ್ಳು ಭರವಸೆ ಕೊಟ್ಟು, ಗ್ಯಾರಂಟಿ ಎಂದು ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದು ಎಷ್ಟು ಸರಿ. ಸರಿ, ತಪ್ಪು ಎನ್ನುವುದನ್ನು ನಾವು ಮಾಡಬೇಕಲ್ಲವೇ ಎಂದು ಅಭಿಪ್ರಾಯಪಟ್ಟರು. ಕೇಂದ್ರ ಸರ್ಕಾರ ಯಾಕೆ ಅಕ್ಕಿ ಕೊಡಬೇಕು ನಿಮಗೆ? ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿದ್ರಾ ನೀವು? ಯಾವನೋ ಬಂದು ಎಲೆಕ್ಷನ್ ಸ್ಟ್ರಾಟೆಜಿಸ್ಟ್ ಐಡಿಯಾ ಕೊಟ್ಟ ಅಂತ ನೀವು ಫ್ರೀ ಫ್ರೀ ಎಂದು ಹೇಳಿದಿರಿ. ಸಚಿವರ ಹೆಂಡ್ತಿಗೂ ಫ್ರೀ, ನನ್ನ ಹೆಂಡತಿಗೂ ಫ್ರೀ ಎಂದು ಹೇಳಿ ಎಲ್ಲರೂ ಅರ್ಜಿ ಹಾಕಿಕೊಳ್ಳಬಹುದು ಎಂದು ಹೇಳಿದಿರಿ. ಈಗ ನೋಡಿದರೆ ಬೇರೆ ವರಸೆ ಶುರು ಮಾಡಿಕೊಂಡಿದ್ದೀರಿ ಎಂದು ವಾಗ್ದಾಳಿ ನಡೆಸಿದರು.

ಗೃಹಜ್ಯೋತಿ ಕತ್ತಲಾಗಿ ಪರಿಣಮಿಸಿದೆ. ವಿದ್ಯುತ್ ಉಚಿತ ಕೊಡ್ತೀವಿ ಅಂತ ಹೇಳಿದವರು ಈಗಿನ ಪರಿಸ್ಥಿತಿಯನ್ನು ಅವಲೋಕನ ಮಾಡಬೇಕು. ವಿಟಿಯು ಉಪ ಕುಲಪತಿ ಬಾಯಿ ಬಡ್ಕೊತಿದ್ದಾರೆ. ವಿದ್ಯುತ್ ಬಿಲ್ ನೋಡಿ ಅವರು ಶಾಕ್‌ಗೆ ಗುರಿಯಾಗಿದ್ದಾರೆ. ಬಾಕಿ ಮೊತ್ತ ಕಂಡು ಬೇಸ್ತು ಬಿದ್ದಿದ್ದಾರೆ. ಇನ್ನೆಷ್ಟು ಶಾಕ್ ಕೊಡುತ್ತೀರಿ ಎಂದು ಮಾಜಿ ಮುಖ್ಯಮಂತ್ರಿ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಮುಖ್ಯಮಂತ್ರಿಗಳು ನೋಡಿದರೆ ಭಾರತದ ಆಹಾರ ನಿಗಮಕ್ಕೆ ಪತ್ರ ಬರೆದಿದ್ದೆ ಎಂದು ಹೇಳುತ್ತಿದ್ದಾರೆ. ಅವರು ಜವಾಬ್ದಾರಿ ಸ್ಥಾನದಲ್ಲಿ ಇದ್ದು ಇಂಥ ಉಡಾಫೆ ಉತ್ತರ ಕೊಟ್ಟರೆ ಹೇಗೆ? ಕೇಂದ್ರದಿಂದ ಅಕ್ಕಿ ಬೇಕು ಅಂದರೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರ ಜತೆ ಮಾತನಾಡಬೇಕಿತ್ತು. ಮನವಿ ಕೊಡಬೇಕಿತ್ತು. ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವರೇ ಹೋಗಿ ಚರ್ಚೆ ನಡೆಸಬೇಕಿತ್ತು. ಅದನ್ನು ಬಿಟ್ಟು ಉಡಾಫೆ ಹೇಳಿಕೆ ಕೊಡ್ತಿದ್ದಾರೆ ಎಂದು ಅವರು ಕಿಡಿಕಾರಿದರು.

ಕೇಂದ್ರ ಸರ್ಕಾರ ಸರ್ವರ್ ಹ್ಯಾಕ್ ಮಾಡಿದ್ದ ಪರಿಣಾಮ ಗೃಹಲಕ್ಷ್ಮಿ ಗ್ಯಾರಂಟಿ ಜಾರಿ ಮಾಡಲಾಗುತ್ತಿಲ್ಲ ಎಂದಿರುವ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆ ಬಗ್ಗೆ ಕೇಳಲಾದ ಪ್ರಶ್ನೆಗೆ ಸಿಡಿಮಿಡಿಯಾದ ಮಾಜಿ ಮುಖ್ಯಮಂತ್ರಿಗಳು, ಯಾರ್ರೀ ಸತೀಶ್ ಜಾರಕಿಹೊಳಿ? ಬಾಯಿ ಚಪಲಕ್ಕೆ ಮಾತನಾಡ್ತಿದ್ದಾರೆ. ಅವರು ಯಾಕೆ ಹ್ಯಾಕ್ ಮಾಡ್ತಾರೆ, ನಿಮ್ಮ ಸರ್ವರ್ ಬಲಪಡಿಸಿ ಕೊಳ್ಳೋದು ನಿಮ್ಮ ಜವಾಬ್ದಾರಿ ಎಂದರು.

## ಮೊಟ್ಟೆ ಕಡಿತಕ್ಕೆ ಕುಮಾರಸ್ವಾಮಿ ಆಕ್ಷೇಪ



ಶಾಲಾ ಮಕ್ಕಳಿಗೆ ವಿತರಣೆ ಮಾಡಲಾಗುವ ಮೊಟ್ಟೆ, ಬಾಳೆ ಹಣ್ಣು ಕಡಿತ ಮಾಡಿರುವ ಬಗ್ಗೆ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರು ಆಕ್ಷೇಪ ವ್ಯಕ್ತಪಡಿಸಿದರು.

ಮುಂದೆ ಒಂದು ಮೊಟ್ಟೆ, ಒಂದು ಬಾಳೆಹಣ್ಣು ಕೂಡ ಇರಲ್ವೇನೊ? ಇವರಿಗೆ ಮಕ್ಕಳ ಆಹಾರದಲ್ಲಿ ಹಣದ ಹಪಾಹಪಿ ಶುರುವಾಗಿದೆ ಎಂದವರು ಕಟುವಾಗಿ ಟೀಕಿಸಿದರು. ಒಂದರಿಂದ ಎಂಟನೇ ತರಗತಿಯವರೆಗಿನ ಮಕ್ಕಳಿಗೆ ವಾರಕ್ಕೊಮ್ಮೆ ಮಾತ್ರ ಮೊಟ್ಟೆ ನೀಡಬೇಕು. ಇದು ಬೇಡದವರಿಗೆ ಚಿಕ್ಕಿ ಅಥವಾ ಬಾಳೆ ಹಣ್ಣು ನೀಡುವಂತೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು. ಈ ಹಿಂದೆ ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುತ್ತಿತ್ತು.

# ಯೋಗಾಭ್ಯಾಸದಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ



ಹೊನ್ನಾಳಿ

ಹೊನ್ನಾಳಿ, ಜೂ. 21- ಪ್ರತೀ ದಿನ ಯೋಗ ಮಾಡುವುದರಿಂದ ರೋಗಗಳಿಂದ ದೂರವಿದ್ದು ದೀರ್ಘಾಯುಷಿಗಳಾಗಬಹುದು ಎಂದು ಪೋದಾರ್ ಲರ್ನ್ ಸ್ಕೂಲ್‌ನ ಪ್ರಾಂಶುಪಾಲ ತಿಪ್ಪೇಸ್ವಾಮಿ ನಾಯಕ್ ಸಲಹೆ ನೀಡಿದರು.

ತಾಲ್ಲೂಕಿನ ಕಮ್ಮಾರಘಟ್ಟೆಯ ಪೋದಾರ್ ಲರ್ನ್ ಸ್ಕೂಲ್‌ನಲ್ಲಿ 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ಶಾಲೆಯಲ್ಲಿ ಯೋಗ-ಧ್ಯಾನ ಸೇರಿದಂತೆ ಪಠ್ಯದ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಒತ್ತು ಕೊಟ್ಟು, ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ವಿಶೇಷ ಆದ್ಯತೆ ನೀಡಲಾಗುವುದು ಎಂದರು.

ವಿದ್ಯಾರ್ಥಿಗಳು ಪ್ರತೀ ದಿನ ಬೆಳಿಗ್ಗೆ ಬೇಗ ಎದ್ದು ನಿಯಮಿತವಾಗಿ ಯೋಗ-ಧ್ಯಾನ ಮಾಡುವುದರಿಂದ ಶೈಕ್ಷಣಿಕವಾಗಿಯೂ ಅತ್ಯುತ್ತಮ ಪ್ರಗತಿ ಸಾಧಿಸಬಹುದು ಎಂದು ತಿಳಿಸಿದರು.

ಯೋಗವು ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದೆ. ಮನಸ್ಸು ಮತ್ತು ದೇಹದ ನಡುವೆ ಸಾಮರಸ್ಯ ತರುವ ಕೆಲಸವನ್ನು ಯೋಗವು ಮಾಡುತ್ತದೆ ಎಂದರು.

ಈ ಸಂದರ್ಭದಲ್ಲಿ ಶಿಕ್ಷಕ ವೃಂದದ ಅಭಿಷೇಕ್, ಜ್ಯೋತಿ, ರಶ್ಮಿ, ಮಾರುತಿ, ಧನಂಜಯ್, ನೇತ್ರಾವತಿ, ಪೂಜಾ, ಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಪರಿಸರ ಉಳಿಸಿ

**(1ನೇ ಪುಟದಿಂದ)** ಆದರೆ ಭಾರತ ನಾಶವಾದರೆ ಮತ್ತೊಂದು ಭಾರತ ಕಟ್ಟಲು ಸಾಧ್ಯವಿಲ್ಲ. ಸಂತರು, ಶರಣರು, ಮಹಾತ್ಮರು ಇಂದು ನಮ್ಮೊಂದಿಗಿಲ್ಲ. ಆದರೆ ಅವರನ್ನು ನೆನೆಯುವುದೇ ನಿಜವಾದ ಧ್ಯಾನ ಎಂದು ಹೇಳಿದರು.

# ಶ್ರೀಶೈಲ ಜಗದ್ಗುರುಗಳಿಂದ ಸಚಿವ ಎಸ್ಸೆಸ್ಸೆಂಗೆ ಆಶೀರ್ವಾದ



ದಾವಣಗೆರೆ, ಜೂ. 21 - ಈಚೆಗೆ ನಗರಕ್ಕೆ ಆಗಮಿಸಿದ್ದ ಶ್ರೀಶೈಲ ಮಹಾಪೀಠದ ಜಗದ್ಗುರು ಶ್ರೀ ಚನ್ನಸಿದ್ಧರಾಮ ಪಂಡಿತಾ ರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಭೇಟಿಯಾಗಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಯುವ ಮುಖಂಡ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ್, ವಕೀಲ ತ್ಯಾವಣಿಗೆ ಮಲ್ಲಿಕಾರ್ಜುನ, ಮುಖಂಡ ಎನ್.ಎಂ. ತಿಪ್ಪೇಸ್ವಾಮಿ, ದೇವರಮನಿ ಯೋಗೀಶ್, ಗುರುರಾಜ್ ಅಥಣಿ, ಬನ್ನಯ್ಯ ಉಪಸ್ಥಿತರಿದ್ದರು.

# ‘ಸುಕಲ್ಪ-2023’ ರಾಜ್ಯ ಮಟ್ಟದ ತಾಂತ್ರಿಕ ಉತ್ಸವಕ್ಕೆ ಅದ್ದೂರಿ ಚಾಲನೆ



ದಾವಣಗೆರೆ, ಜೂ. 21- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾ ಲಯದ ಇನ್ಫಾರ್ಮೇಶನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಿಂದ ರಾಜ್ಯಮಟ್ಟದ ಎರಡು ದಿನಗಳ ತಾಂತ್ರಿಕ ಉತ್ಸವ ‘ಸುಕಲ್ಪ-2023’ ಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮಂಡ್ಯದ ಪಿಇಎಸ್ ಕಾಲೇಜಿನ ಪ್ರೊ. ಎಸ್. ವಿನಯ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಬುದ್ಧಿಶಕ್ತಿಯನ್ನು ಹೆಚ್ಚಿಸಿ ಕೊಳ್ಳಬೇಕು. ಮುಂಬರುವ ಸವಾಲುಗಳನ್ನು ಧೈರ್ಯವಾಗಿ ಎದುರಿಸಬೇಕೆಂದು ಕರೆ ನೀಡಿದರು.

ಡಾ. ಸುನಿಲ್ ಕುಮಾರ್ ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಪ್ರಾಚಾರ್ಯ ಡಾ. ಸಂಜಯ್ ಪಾಂಡೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾಲೇಜಿನ ಆಡಳಿತಾಧಿಕಾರಿ ವೈ.ಯು. ಸುಭಾಷ್ ಚಂದ್ರ, ಡಾ. ಬಿ.ಎಸ್. ಸುನಿಲ್ ಕುಮಾರ್, ತೇಜಸ್ವಿ ಕಟ್ಟಿಮನಿ, ಡಾ. ನೀಲಾಂಬಿಕೆ, ನಸ್ರಿನ್ ತಾಜ್, ವೀರಪ್ಪ ಮತ್ತಿತರರಿದ್ದರು.

# ಬಲ್ಲೂರು ಗ್ರಾಮದಲ್ಲಿ ಬಸಿಯುತ್ತಿರುವ ನೀರು



## ಕ್ರಮಕ್ಕೆ ರಾಜ್ಯ ರೈತ ಸಂಘದಿಂದ ಜಿಲ್ಲಾಧಿಕಾರಿಗೆ ಮನವಿ

ದಾವಣಗೆರೆ, ಜೂ.21- ತಾಲ್ಲೂಕಿನ ಬಲ್ಲೂರು ಗ್ರಾಮದಲ್ಲಿ ಬಸಿಯುತ್ತಿರುವ ನೀರಿನ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘವು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

12-09-2008 ರಲ್ಲಿಯೇ ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿ, ಕಾರ್ಯಪಾಲಕ ಅಭಿಯಂತರರು ಹಾಗೂ ತಹಶೀಲ್ದಾರವರು ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆಗ ಸದರಿ ಗ್ರಾಮದ ಮೇಲ್ಭಾಗದಲ್ಲಿ ನೀರಾವರಿ ಇದ್ದು, ನೀರಾವರಿ ಜಮೀನಿನಿಂದ 8 ರಿಂದ 10 ಅಡಿ ಕೆಳಭಾಗದಲ್ಲಿ ಗ್ರಾಮವಿದ್ದು, ಗ್ರಾಮಕ್ಕೆ ನೀರು ಬಸಿಯುತ್ತಿದೆ. ಜಂಗಲ್ ಮತ್ತು ಹೂಳು ತುಂಬಿರುವುದರಿಂದ ಮನೆಯ ಗೋಡೆಗಳು ಮತ್ತು ನೆಲ ತೇವಾಂಶದಿಂದ ಕೂಡಿದ್ದು, ವಾಸಕ್ಕೆ ತೊಂದರೆಯಾಗಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ.

2008ರಿಂದ ಈವರೆಗೂ ಸಹ ನೀರಾವರಿ ಇಲಾಖೆಯಾಗಲಿ, ಕಂದಾಯ ಇಲಾಖೆಯಾಗಲಿ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ತುರ್ತು ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದಲ್ಲಿ ಉಚ್ಚನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್.ಪ್ರಸಾದ್, ಉಪಾಧ್ಯಕ್ಷ ರಾಂಪುರದ ಬಸವರಾಜ, ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮುಖಂಡರಾದ ಪರಶುರಾಮರೆಡ್ಡಿ, ಮಾಯಕೊಂಡದ ಅಶೋಕ, ಚಿನ್ನಸಮುದ್ರ ಭೀಮಾನಾಯ್ಕ, ಐಗೂರು ಶಿವಮೂರ್ತಪ್ಪ, ನಾಗರಕಟ್ಟೆ ಜಯನಾಯ್ಕ, ಮಾಯ ಕೊಂಡದ ಪ್ರತಾಪ್ ಮತ್ತಿತರರು ಇದ್ದರು.

# ಕೇಂದ್ರ ಅಕ್ಕಿ ಕೊಡದಿದ್ದರೆ ಅನ್ನಭಾಗ್ಯ ತಡ : ಸಿದ್ದರಾಮಯ್ಯ

**(1ನೇ ಪುಟದಿಂದ)** ಸಾಧ್ಯ, ಅಕ್ಕಿ ಸಾಧ್ಯವಿಲ್ಲ ಎಂದು ಹೇಳಿದೆ. ಆಂಧ್ರ ಪ್ರದೇಶ ಕೆಜಿ ಅಕ್ಕಿಗೆ 42-43 ರೂ. ಎಂದು ಹೇಳುತ್ತಿದೆ. ಪಂಜಾಬ್ ಈ ವಿಷಯದ ಬಗ್ಗೆ ಇನ್ನೂ ಪ್ರತಿಕ್ರಿಯೆ ನೀಡಿಲ್ಲ ಎಂದರು.

ಮುಕ್ತ ಮಾರುಕಟ್ಟೆಯಿಂದ ಅಕ್ಕಿ ಖರೀದಿಸಲು ಹೋದರೆ ಬಿಡ್‌ಗಳನ್ನು ಕರೆಯಬೇಕಾಗುತ್ತದೆ. ಈ ಪ್ರಕ್ರಿಯೆಗೆ ಎರಡು ತಿಂಗಳು ಬೇಕಾಗುತ್ತದೆ. ಇದರಿಂದ ಯೋಜನೆ ಜಾರಿ ವಿಳಂಬವಾಗುತ್ತದೆ ಎಂದವರು ಹೇಳಿದರು.

ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಅವರು ಅಕ್ಕಿಗೆ ವ್ಯವಸ್ಥೆ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ಕೇಂದ್ರ ಸಂಸ್ಥೆಗಳಿಂದ ಅಕ್ಕಿ ಖರೀದಿಗೆ ಕೊಟೇಷನ್ ಕೇಳಿದ್ದೇವೆ. ನಾಳೆ ಅವರು ಪ್ರತಿಕ್ರಿಯೆ ನೀಡಲಿದ್ದಾರೆ, ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಈ ಬಗ್ಗೆ ಮಾತನಾಡಿರುವ ಸಚಿವ ಮುನಿಯಪ್ಪ, ಯೋಜನೆ ಜಾರಿಗೆ ತರಲು ರಾಜ್ಯ ಸರ್ಕಾರಕ್ಕೆ 2.28 ಲಕ್ಷ ಟನ್ ಅಕ್ಕಿಯ ಅಗತ್ಯವಿದೆ. ಆದಷ್ಟು ಶೀಘ್ರ ಅಕ್ಕಿ ಪೂರೈಸಲಿದ್ದೇವೆ ಎಂದಿದ್ದಾರೆ.

ಕೇಂದ್ರೀಯ ಭಂಡಾರ, ನೆಫೆಡ್ ಹಾಗೂ ಎನ್.ಸಿ.ಸಿ.ಎಫ್. ಮೂಲಕ ಅಕ್ಕಿ ಪಡೆಯಲು ಪ್ರಯತ್ನ ನಡೆಸಲಾಗುತ್ತಿದೆ. ಗುಣಮಟ್ಟದ ಅಕ್ಕಿಯನ್ನು ಕಡಿಮೆ ಬೆಲೆಗೆ ಪಡೆಯುವ ಪ್ರಯತ್ನ ನಡೆಸಿದ್ದೇವೆ ಎಂದವರು ತಿಳಿಸಿದ್ದಾರೆ.

ಕೇಂದ್ರ ಆಹಾರ ಸಚಿವ ಪಿಯೂಶ್ ಗೋಯಲ್ ಅವರನ್ನು ಭೇಟಿ ಮಾಡುವ ಪ್ರಯತ್ನದಲ್ಲಿದ್ದೇನೆ. ಆದರೆ, ಇನ್ನೂ ಅವರು ಸಮಯ ನೀಡಿಲ್ಲ ಎಂದು ಮುನಿಯಪ್ಪ ತಿಳಿಸಿದರು.

# ಆಧಾರ್ ಕಾರ್ಡ್‌ಗೆ ಮೊಬೈಲ್ ನಂಬರ್ ಲಿಂಕ್ ಮಾಡಿಸಲು ಜನ ಕ್ಯೂ



ಮಲೇಬೆನ್ನೂರು, ಜೂ.21- ಕಾಂಗ್ರೆಸ್ ಸರ್ಕಾರದ ಗ್ಯಾರೆಂಟಿ ಯೋಜನೆಗಳ ಸೌಲಭ್ಯ ಪಡೆಯಲು ಅನುಕೂಲವಾಗುವಂತೆ ಆಧಾರ್ ಕಾರ್ಡ್‌ಗೆ ಮೊಬೈಲ್ ನಂಬರ್ ಲಿಂಕ್ ಮಾಡಿಸಲು ಜನ ಬ್ಯಾಂಕುಗಳ ಮುಂದೆ ಕ್ಯೂ ನಿಂತಿರುವ ಘಟನೆ ಬುಧವಾರ ಬೆಳಿಗ್ಗೆ 7 ಗಂಟೆಗೆ ಮಲೇಬೆನ್ನೂರು ಮತ್ತು ಕುಂಬಳೂರಿನಲ್ಲಿ ಕಂಡು ಬಂತು. ಮಲೇಬೆನ್ನೂರು ಮತ್ತು ಕುಂಬಳೂರು ಸುತ್ತಮುತ್ತಲಿನ ಹಳ್ಳಿಗಳ ಜನರು ಆಧಾರ್ ಕಾರ್ಡ್‌ನೊಂದಿಗೆ ಮಲೇಬೆನ್ನೂರಿನ ಎಸ್‌ಬಿಐ ಬ್ಯಾಂಕ್ ಬಾಗಿಲಿನಲ್ಲಿ ಮತ್ತು ಕುಂಬಳೂರಿನ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಬಾಗಿಲಿನ ಬಳಿ ಸರದಿ ಸಾಲಿನಲ್ಲಿ ನಿಂತಿರುವ ದೃಶ್ಯ ಸಾಮಾನ್ಯ ವಾಗಿತ್ತು. ಯಾಕೆ ರೀತಿ ಇವರು ಇಷ್ಟೊತ್ತಿಗೆ ಕ್ಯೂ ನಿಂತಿದ್ದಾರೆ ಎಂದು ವಿಚಾರಿಸಿದಾಗ ಸರ್ಕಾರದ ಸೌಲಭ್ಯ ಪಡೆಯಲು ಆಧಾರ್ ಕಾರ್ಡ್‌ಗೆ ಮೊಬೈಲ್ ನಂಬರ್ ಲಿಂಕ್ ಮಾಡಿಸುವುದಕ್ಕಾಗಿ ಬಂದಿದ್ದಾರೆ ಎಂದು ಗೊತ್ತಾಯಿತು.

**ಇವತ್ತು ಮತ್ತೆ ಹೆಚ್ಚಾದ ಜನ :** ಮಲೇಬೆನ್ನೂರು ಪುರಸಭೆ ವಸತಿ / ನಿವೇಶನಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಪಡೆಯಲು ಪುರಸಭೆ ಕಚೇರಿ ಬಳಿ ಬುಧವಾರವೂ ಹೆಚ್ಚು ಮಹಿಳೆಯರು ಕಂಡು ಬಂದರು. ಅರ್ಜಿಯೊಂದಿಗೆ ಛಾಪಾಕಾಗದ ನೋಟರಿ ಮಾಡಿಸಿ ಸಲ್ಲಿಸಬೇಕಾಗಿರುವುದರಿಂದ ಛಾಪಾ ಕಾಗದ ಇವತ್ತೂ ಕೂಡ ನಂದಿ ಸೌಹಾರ್ದ ಸಹಕಾರಿ ಮತ್ತು ಶಿವ ವಿವಿಧೋದ್ದೇಶ ಸಹಕಾರ ಸಂಘಗಳಲ್ಲಿ ಜನ ಜಾತ್ರೆ ಉಂಟಾಗಿತ್ತು. ಛಾಪಾ ಕಾಗದ ಪಡೆಯಲು ಬಹುತೇಕ ಮಹಿಳೆಯರು ಆಗಮಿಸಿದ್ದರು.

# ಭ್ರಷ್ಟಾಚಾರ ;ಬಾಯಿ ಬಿಟ್ಟರೆ ಬಂಡವಾಳ ಬಯಲು: ಡಿಕೆಶಿ

ಬೆಂಗಳೂರು, ಏ. 21 - ಭ್ರಷ್ಟಾಚಾರದ ಬಗ್ಗೆ ಬಿಜೆಪಿ ಮುಖಂಡರು ಬಾಯಿಬಿಟ್ಟರೆ, ಅವರ ಬಂಡವಾಳ ಬಯಲು ಮಾಡುವುದಾಗಿ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಸಿದ್ದಾರೆ.

ಸರ್ಕಾರ ಬಂದು ಒಂದು ತಿಂಗಳು ಪೂರೈಸಿಲ್ಲ. ಆಗಲೇ ಬಿಜೆಪಿಯವರು ಎಂದಿನಂತೆ ಸುಳ್ಳಿನ ಸರಮಾಲೆಯನ್ನು ಹರಿಬಿಟ್ಟು ಜನರನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ.

ಈ ಆಟ ನಮ್ಮ ಹತ್ತಿರ ನಡೆಯುವುದಿಲ್ಲ. ಈಗಾಗಲೇ ಮಾಜಿ ಸಚಿವರೊಬ್ಬರು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡದೇ 123 ಕೋಟಿ ರೂ. ಹಗರಣವನ್ನು ಅಧಿಕಾರಿಗಳು ಬಯಲಿಗೆಳೆದಿದ್ದಾರೆ ಎಂದರು.

ಇಂತಹ ಹಲವು ಪ್ರಕರಣಗಳ ಬಗ್ಗೆ ನಮಗೆ ಮಾಹಿತಿ ಇದೆ. ಇವುಗಳನ್ನು ಪತ್ತೆಹಚ್ಚಲು ಬಿಡಿಎ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಎಸ್‌ಐಟಿ ರಚನೆ ಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದರು.

ನಮ್ಮ ವಿರುದ್ಧ ಅವರು ದಿನನಿತ್ಯ ಜೋರಾಗಿ ಬಾಯಿಬಿಡಲಿ. ಅವರು ಬಾಯಿ ಬಿಟ್ಟರೆ ನಮಗೆ ಅಸ್ತ್ರ ಹೊರತರಲು ಸಾಧ್ಯ ಎಂದರು.

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯ ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದರು.

ನಾವು ಸುಮ್ಮನೆ ಮಾತನಾಡುವುದಿಲ್ಲ. ದಾಖಲೆ ಬಿಚ್ಚಿಯೇ ಅವರ ಬಂಡವಾಳ ಬಹಿರಂಗಗೊಳಿಸುವುದಾಗಿ ಗುಡುಗಿದರು.

ಎಲ್ಲಾ ಇಲಾಖೆಗಳಲ್ಲಿ ವರ್ಗಾವಣೆ ದಂಧೆಗೆ ರೇಟ್ ಫಿಕ್ಸ್ ಆಗಿದೆ ಎಂಬ ಬಿಜೆಪಿ ಆರೋಪದ ಬಗ್ಗೆ ಕೇಳಿದಾಗ, ‘ಅವರು ತಡ ಮಾಡದೇ ಲೋಕಾಯುಕ್ತಕ್ಕೆ ದೂರು ನೀಡಲಿ’ ಎಂದು ತಿಳಿಸಿದರು.

# ಪಿಎಸ್‌ಐ ಹಗರಣ : ಅಭ್ಯರ್ಥಿಗಳು ಡಿಬಾರ್

**(1ನೇ ಪುಟದಿಂದ)** ಭಾಗಿಯಾದ ಆರೋಪಿಗಳ ವಿರುದ್ಧ ತನಿಖೆ ನಡೆಸಿದ್ದ ಸಿಐಡಿಯು 52 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪೊಲೀಸ್ ಇಲಾಖೆ ನಡೆಸುವ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಶಾಶ್ವತವಾಗಿ ನಿಷೇಧಿಸಲಾಗಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

# ನಂದಿನಿ ಹಾಲಿನ ದರ ಹೆಚ್ಚಳಕ್ಕೆ ಪ್ರಸ್ತಾಪ

**(1ನೇ ಪುಟದಿಂದ)** ಹಾಗೂ ಗ್ರಾಹಕರಿಗೆ ಹೊರೆಯಾಗದ ರೀತಿಯಲ್ಲಿ ಮುಖ್ಯಮಂತ್ರಿ ನಿರ್ಧರಿಸಲಿದ್ದಾರೆ ಎಂದು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಹಕಾರ ಸಚಿವ ಕೆ.ಎನ್. ರಾಜಣ್ಣ, ರೈತರು ತರುವ ಹಾಲಿಗೆ ಉತ್ತಮ ಬೆಲೆ ಕೊಡಬೇಕಿದೆ. ರೈತರಿಗೆ ಹೆಚ್ಚು ಶಕ್ತಿ ತರುವ ರೀತಿಯಲ್ಲಿ ಪ್ರಯತ್ನ ಮಾಡಬೇಕಿದೆ ಎಂದಿದ್ದಾರೆ.

# ಸಂಯಮದ ಪ್ರತಿರೋಧ ಯಶಸ್ಸಿಗೆ ಸೂತ್ರ

**(1ನೇ ಪುಟದಿಂದ)** ಬಗೆಹರಿಸಲು ಸಾಧ್ಯವೇ? ಎಂಬ ಪ್ರಶ್ನೆ ಕೇಳಿ ಬಂದಿತ್ತು ಎಂದು ಮನೋಹರನ್ ಹೇಳಿದರು. ಆದರೆ, ನಮ್ಮೆಲ್ಲರ ಜೀವನವೂ ತಾತ್ಕಾಲಿಕವೇ. ಹೀಗಿರುವಾಗ ಮಂಡಳಿ ತಾತ್ಕಾಲಿಕ ಎಂಬ ಬಗ್ಗೆ ಹೆಚ್ಚು ಚಿಂತೆ ಮಾಡದೇ, ಕಂಪನಿಯನ್ನು ಶಾಶ್ವತವಾಗಿ ನಿರ್ಮಿಸುವ ಕಡೆ ಗಮನ ಹರಿಸಿದೆ. ಇದರಿಂದಾಗಿ ಸತ್ಯಂ ಕಂಪ್ಯೂಟರ್‌ಗೆ ಯಶಸ್ವಿಯಾಗಿ ಮರು ಜೀವ ನೀಡಲು ಸಾಧ್ಯವಾಯಿತು ಎಂದು ತಿಳಿಸಿದರು.

ಲೆಕ್ಕ ಪರಿಶೋಧನೆ ಅತ್ಯಂತ ಕಠಿಣ ಪರೀಕ್ಷೆ ಎಂದು ಹೇಳಲಾಗುತ್ತದೆ. ಆದರೆ, ಆ ಪರೀಕ್ಷೆಯಲ್ಲಿ ಒಮ್ಮೆ ವಿಫಲವಾದರೂ, ಮತ್ತೆ ಯಶಸ್ಸು ಗಳಿಸಲು ಸಂಯಮದ ಪ್ರತಿರೋಧ ವಿದ್ಯಾರ್ಥಿಗಳಿಗೆ ಬೇಕು ಎಂದು ಮನೋಹರನ್ ಹೇಳಿದರು.

ಮಹಾತ್ಮ ಗಾಂಧೀಜಿ ಅವರನ್ನು ದಕ್ಷಿಣ ಆಫ್ರಿಕಾದಲ್ಲಿ ದೈಹಿಕವಾಗಿ ರೈಲಿನಿಂದ ಹೊರ ದೂಡಲಾಯಿತು. ಗಾಂಧೀಜಿ ಅವರು ಸಂಯಮದ ಪ್ರತಿರೋಧದಿಂದ ಬ್ರಿಟಿಷರನ್ನು ದೇಶದಿಂದಲೇ ಹೊರ ದೂಡಿದರು. ಇದು ಸಂಯಮದ ಪ್ರತಿರೋಧಕ್ಕೆ ಉದಾಹರಣೆ ಎಂದು ತಿಳಿಸಿದರು.

ಭವನದಲ್ಲಿರುವ ಅಥಣಿ ವೀರಣ್ಣ ಸಭಾಂಗಣ ಉದ್ಘಾಟಿಸಿ ಮಾತನಾಡಿದ ಶಾಸಕ ಶಾಮನೂರು ಶಿವಶಂಕರಪ್ಪ, ಸರ್ಕಾರದ ಆದೇಶಗಳ ಅನ್ವಯ ವ್ಯವಹಾರಗಳಲ್ಲಿ ಲೆಕ್ಕ ಪರಿಶೋಧಕರ ಪಾತ್ರ ಪ್ರಮುಖವಾಗಿದೆ. ಹೀಗಾಗಿ ಲೆಕ್ಕ ಪರಿಶೋಧಕರ ಅಗತ್ಯ ಹೆಚ್ಚಾಗುತ್ತಿದೆ ಎಂದು ಹೇಳಿದರು.

ಈ ಭವನದಲ್ಲಿ ಸಿ.ಎ. ವಿದ್ಯಾರ್ಥಿಗಳ ತರಬೇತಿಗೆ ಅವಕಾಶ ಕಲ್ಪಿಸಲಾಗಿದೆ. ಹೆಣ್ಣು ಮಕ್ಕಳೂ ಸಹ ಸಿ.ಎ. ಕಲಿಯಲು ಹೆಚ್ಚಾಗಿ ಮುಂದೆ ಬರುತ್ತಿದ್ದಾರೆ. ಅವರಿಗೂ ಈ ಭವನ ನೆರವಾಗಲಿದೆ ಎಂದರು.

ಅಸೋಸಿಯೇಷನ್‌ನ ವೆಬ್‌ಸೈಟ್ ಉದ್ಘಾಟಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಲೆಕ್ಕ ಪರಿಶೋಧಕರು ದೇಶದ ಬೆಳವಣಿಗೆಯಲ್ಲಿ ಭಾಗಿದಾರರು. ದೇಶ ರಕ್ಷಿಸಲು ಸೈನಿಕರ ಅಗತ್ಯವಿರುವ ರೀತಿಯಲ್ಲೇ, ಆರ್ಥಿಕತೆ ಬಲಿಷ್ಠವಾಗಿರಲು ಲೆಕ್ಕ ಪರಿಶೋಧಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಜಿ.ಎಸ್.ಟಿ. ಸುಧಾರಣೆಯನ್ನು ವ್ಯಾಪಾರಿಗಳಿಗೆ ತಿಳಿಸಿ, ಜನರ ಮನವೊಲಿಸುವಲ್ಲಿ ಲೆಕ್ಕಪರಿಶೋಧಕರ ಪಾತ್ರ ಮಹತ್ವದ್ದಾಗಿದೆ. ಸರ್ಕಾರ ಮಾಡುವ ಬದಲಾವಣೆಗಳನ್ನು ಜನರಿಗೆ ತಿಳಿಸುವಲ್ಲಿ ನಿಮ್ಮ ಪಾತ್ರ ಮುಖ್ಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅಸೋಸಿಯೇಷನ್ ಗೌರವಾಧ್ಯಕ್ಷ ಅಥಣಿ ವೀರಣ್ಣ, ನರಸಿಂಹ ರಾವ್ ಅವರು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಜಾರಿಗೆ ತಂದ ಉದಾರೀಕರಣದ ನಂತರ ಲೆಕ್ಕ ಪರಿಶೋಧಕರ ಬೇಡಿಕೆ ಗಣನೀಯವಾಗಿ ಹೆಚ್ಚಾಗಿದೆ. ನಗರದಲ್ಲಿ ಈಗ 70ಕ್ಕೂ ಹೆಚ್ಚು ಲೆಕ್ಕ ಪರಿಶೋಧಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಅಸೋಸಿಯೇಷನ್ ಅಧ್ಯಕ್ಷ ಎ. ಕಿರಣ್ ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಐ.ಸಿ.ಎ.ಐ. ದಕ್ಷಿಣ ವಿಭಾಗದ ಅಧ್ಯಕ್ಷ ಎಸ್. ಪನ್ನ ರಾಜ್, ಐ.ಸಿ.ಎ.ಐ. ಕೇಂದ್ರ ಮಂಡಳಿ ಅಧ್ಯಕ್ಷ ಕೋತ ಶ್ರೀನಿವಾಸ್, ರಾಜ್ಯ ಸಂಘದ ಅಧ್ಯಕ್ಷ ಪ್ರಮೋದ್ ಶ್ರೀಹರಿ, ಜಿಲ್ಲಾ ಅಸೋಸಿಯೇಷನ್ ಕಾರ್ಯದರ್ಶಿ ಉಮೇಶ್ ಶೆಟ್ಟಿ, ಉದ್ಘಾಟನಾ ಸಮಿತಿಯ ಅಧ್ಯಕ್ಷ ಎ. ಕಿರಣ್ ಕುಮಾರ್, ಸಂಚಾಲಕ ಎನ್.ಜಿ. ಗಿರೀಶ್ ನಾಡಿಗ್ ಮತ್ತಿತರರು ಉಪಸ್ಥಿತರಿದ್ದರು. ಹೆಚ್. ಮಹೇಶ್ ನಿರೂಪಿಸಿದರು.

## ಕರೆಸಿದ್ದು ಉದ್ಘಾಟನೆಗೆ, ಕೊಟ್ಟಿದ್ದು ಸ್ವರ್ಣ ಮಹೋತ್ಸವಕ್ಕೆ

ಐ.ಡಿ.ಬಿ.ಐ. ಬ್ಯಾಂಕ್ ಅಧ್ಯಕ್ಷ ಟಿ.ಎನ್. ಮನೋಹರನ್ ಅವರನ್ನು ಲೆಕ್ಕ ಪರಿಶೋಧಕರ ಭವನದ ಉದ್ಘಾಟನೆಗೆ ಕರೆಸಲಾಗಿತ್ತು. ಆದರೆ, ಅವರು ಸಂಘದ ಸ್ವರ್ಣ ಮಹೋತ್ಸವದ ಆಚರಣೆಗೆ 1 ಲಕ್ಷ ರೂ. ನೀಡುವುದಾಗಿ ಪ್ರಕಟಿಸಿದರು.

ಕೇವಲ 70 ಸದಸ್ಯರಿರುವ ಈ ಲೆಕ್ಕ ಪರಿಶೋಧಕರ ಸಂಘ, 4 ಕೋಟಿ ರೂ. ವೆಚ್ಚದ ಭವನ ಯೋಜನೆ ಜಾರಿಗೆ ತಂದಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಅವರು, ಸಂಘದ 50ನೇ ವರ್ಷಾಚರಣೆಗೆ ಈಗಿನಿಂದಲೇ ಸಿದ್ಧತೆ ಆರಂಭಿಸಿ. ಆ ಸಮಾರಂಭಕ್ಕೆ ನಾನು ಈಗಲೇ ಲಕ್ಷ ರೂ. ಕೊಡುತ್ತೇನೆ ಎಂದು ಹೇಳಿದರು.

## ಸಂಸದರಿಂದ ಕಟ್ಟಡಕ್ಕೆ 10 ಲಕ್ಷ ರೂ.

ಲೆಕ್ಕ ಪರಿಶೋಧಕರ ನೂತನ ಕಟ್ಟಡಕ್ಕೆ ಸಂಸದರ ನಿಧಿಯಿಂದ 10 ಲಕ್ಷ ರೂ. ಈಗಾಗಲೇ ಕೊಟ್ಟಿದ್ದೇನೆ. ವೈಯಕ್ತಿಕವಾಗಿಯೂ 10 ಲಕ್ಷ ರೂ. ನೀಡುವುದಾಗಿ ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದರು.

# ದೇವನಗರಿಯಲ್ಲಿ ಯೋಗ ಸಂಭ್ರಮ



**(1ನೇ ಪುಟದಿಂದ)** ಯೋಗ ಕಲಿಸುವುದು ಮುಖ್ಯ ಎಂದು ಹೇಳಿದರು.

ಯೋಗದಿಂದ ಕಾಯಿಲೆಗಳಿಂದ ದೂರವಾಗಿ ಉತ್ತಮ ಆರೋಗ್ಯ ಪಡೆಯಬಹುದು. ಪ್ರಧಾನಿ ನರೇಂದ್ರ ಮೋದಿ ವಿಶ್ವಕ್ಕೆ ಯೋಗ ಪರಿಚಯಿಸಿದರು. ಈಗ ಪ್ರಪಂಚದಾದ್ಯಂತ ಹಲವಾರು ದೇಶಗಳಲ್ಲಿ ಯೋಗ ದಿನವನ್ನು ಚಾಚೂ ತಪ್ಪದೆ ಮಾಡುತ್ತಿರುವುದು ಸಂತಸದ ವಿಷಯ ಎಂದರು.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡಿ, ಯೋಗ ಕೇವಲ ದೈಹಿಕ ವ್ಯಾಯಾಮವಲ್ಲ. ಕೇವಲ ಪ್ರಾಣಾಯಾಮವಲ್ಲ. ಇವುಗಳು ಯೋಗದ ಒಂದು ಭಾಗ ಮಾತ್ರ. ನಮ್ಮನ್ನು ಅಧ್ಯಾತ್ಮ ಹಾಗೂ ಸನ್ಮಾರ್ಗದ ಕಡೆ ಕೊಂಡೊಯ್ಯುವ ಮಾರ್ಗವೇ ಯೋಗ ಎಂದು ಹೇಳಿದರು.

ಇಡೀ ಜಗತ್ತು ಸುಖ, ಸಂತೋಷದಿಂದ ಕೂಡಿರಬೇಕು ಎಂಬುದು ಯೋಗದ ಮೂಲ ಉದ್ದೇಶವಾಗಿದೆ. ಆದ್ದರಿಂದಲೇ ಈ ಬಾರಿ ‘ವಿಶ್ವ ಕುಟುಂಬಕ್ಕಾಗಿ ಯೋಗ’ ಘೋಷ ವಾಕ್ಯದಡಿ ಯೋಗ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ಯೋಗಾಭ್ಯಾಸದ ನಂತರ ಯೋಗ ಮುದ್ರೆಯ ಮಹತ್ವ ಕುರಿತು ಮಾತನಾಡಿದ ಶ್ರೀ ಲಕ್ಷ್ಮೀ ಶ್ರೀನಿವಾಸ ಗುರೂಜಿ, ಮನೆಗೊಬ್ಬ ಯೋಗ ಪಟು ಇದ್ದರೆ ಮನೆಯಲ್ಲಿನ ವಾಸ್ತುದೋಷಗಳು ನಿವಾರಣೆಯಾಗುತ್ತವೆ ಎಂದು ಹೇಳಿದರು.

ಮನಸ್ಸಿನ ವಾಸ್ತು ಸರಿ ಇಲ್ಲವೆಂದರೆ ಅರಮನೆಯಲ್ಲಿದ್ದರೂ ಉಪಯೋಗಕ್ಕೆ ಬಾರದು. ವಾಸ್ತುದೋಷ ಮನುಷ್ಯನ ಮನಸ್ಸು ಹಾಗೂ ಶರೀರದಲ್ಲಿರುತ್ತದೆ. ಈ ದೋಷಕ್ಕೆ ಯೋಗ, ಧ್ಯಾನ ಸೂಕ್ತ ಮದ್ದು ಎಂದು ಹೇಳಿದರು.

ಸೂರ್ಯ ನಮಸ್ಕಾರ ಮನಸ್ಸು ಹಾಗೂ ದೇಹದ ಸುಸ್ತು ನಿವಾರಿಸುತ್ತದೆ. ನಿತ್ಯ ಯೋಗಾಭ್ಯಾಸ ಮಾಡುವವರ ಜಾತಕದಲ್ಲಿ ಸೂರ್ಯ ಉಚ್ಚ ಸ್ಥಾನದಲ್ಲಿರುತ್ತಾನೆ. ಜಾತಕ ದೋಷಗಳು ಪರಿಹಾರವಾಗುತ್ತವೆ ಎಂದು ಹೇಳಿದರು.

ಮದುವೆಗೂ ಮುನ್ನ ಮಾಡಿದ ದುಷ್ಟಟಗಳಿಂದಾಗಿ ಬುದ್ದಿ ಮಾಂದ್ಯ ಮಕ್ಕಳು ಜನಿಸುತ್ತವೆ. ಮನಸ್ಸು ಹತೋಟಿ ತಪ್ಪಿ ಜೀವನದಲ್ಲಿ ಸಂತೋಷ ಅನುಭವಿಸಲು ಸಾಧ್ಯವಾಗುವುದಿಲ್ಲ. ಮದುವೆ ನಂತರದ ಸಮಸ್ಯೆಗಳಿಗೆ ಯೋಗ, ಧ್ಯಾನ, ಪ್ರಾಣಾಯಾಮದಿಂದ ಸೂಕ್ತ ಪರಿಹಾರ ಸಿಗಲಿದೆ. ನಿತ್ಯ ಯೋಗ ಮಾಡುವುದರಿಂದ ಉತ್ತಮ ಮಕ್ಕಳನ್ನು ಪಡೆಯಬಹುದು ಎಂದು ಸಲಹೆ ನೀಡಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ, ಯೋಗ ಒಕ್ಕೂಟದ ಗೌರವಾಧ್ಯಕ್ಷ ಬಿ.ಸಿ. ಉಮಾಪತಿ, ಪಾಲಿಕೆ ಸದಸ್ಯ ಎ.ನಾಗರಾಜ್, ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು, ಯೋಗಪಟುಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ಸುದೀರ್ಘವಾಗಿ ಅತಿಥಿಗಳನ್ನು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ನಂತರ ಉಪಹಾರವಾಗಿ ತಟ್ಟೆ ಇಡ್ಲಿ, ಚಟ್ನಿ ವಿತರಿಸಲಾಯಿತು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮನಸ್ಸು-ದೇಹದ ಸಂಪರ್ಕ ಕೊಂಡಿ ಯೋಗ



**ದಾವಣಗೆರೆ ಜಿಲ್ಲಾ ನ್ಯಾಯಾಲಯದಲ್ಲಿನ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ರಾಜೇಶ್ವರಿ ಎನ್.ಹೆಗಡೆ ಅಭಿಮತ**

ದಾವಣಗೆರೆ, ಜೂ. 21- ಯೋಗವು ಮನಸ್ಸು ಹಾಗೂ ದೇಹವನ್ನು ಸಂಪರ್ಕಿಸುವ ಕೊಂಡಿಯಾಗಿದ್ದು, ಬಿಡುವಿಲ್ಲದ ಕೆಲಸದ ನಡುವೆ ಕೆಲ ಸಮಯವನ್ನು ಯೋಗಾಭ್ಯಾಸಕ್ಕೆ ಮೀಸಲಿಟ್ಟರೆ ಮಾನಸಿಕ ಒತ್ತಡ ಕಡಿಮೆಯಾಗಿ ಮನಸ್ಸು ಉಲ್ಲಾಸ ಗೊಳ್ಳುತ್ತದೆ ಮಾತ್ರವಲ್ಲ, ಇಡೀ ದಿನವೂ ಉತ್ಸಾಹದಿಂದ ಇರಬಹುದು ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ರಾಜೇಶ್ವರಿ ಎನ್.ಹೆಗಡೆ ಅಭಿಪ್ರಾಯ ಪಟ್ಟರು.

ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಆಯುಷ್ ಇಲಾಖೆ ಇವರ ಸಹಯೋಗದಲ್ಲಿ ನಗರದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ಆವರಣದಲ್ಲಿ ಇಂದು ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ವರ್ಷ ವಿಶ್ವ ಯೋಗ ದಿನವನ್ನು ಜೂನ್ 21ರಂದು ವಿಶ್ವದಾದ್ಯಂತ ಬಹಳ ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವಿಶ್ವಾದ್ಯಂತ ಹೆಚ್ಚಿನ ಜನರು ತಮ್ಮ ಮಾನಸಿಕ ಒತ್ತಡ ನಿವಾರಿಸಿಕೊಳ್ಳಲು ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗದ ಮೊರೆ ಹೋಗುತ್ತಿದ್ದಾರೆ. ಯೋಗವು ಮನಸ್ಸು ಮತ್ತು ದೇಹವನ್ನು ಸಂಪರ್ಕಿಸುವ ಪ್ರಾಚೀನ ಕಲೆಯಾಗಿದೆ ಎಂದರು.

ಭಾರತವು ಇಡೀ ಜಗತ್ತಿಗೇ ನೀಡಿದ ಒಂದು ದೊಡ್ಡ ಕೊಡುಗೆ ಯೋಗವಾಗಿದೆ. ಯೋಗವು ಸುಮಾರು 6 ಸಾವಿರ ವರ್ಷಕ್ಕೂ ಹಳೆಯದಾದ ಭೌತಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಅಭ್ಯಾಸವಾಗಿದೆ. ವಿಶ್ವದ ಬಹುತೇಕ ರಾಷ್ಟ್ರಗಳು ಪ್ರತಿವರ್ಷ ಯೋಗ ದಿನಾಚರಣೆಯಂದು ಯೋಗ, ಧ್ಯಾನ, ಸಭೆಗಳು, ಚರ್ಚೆಗಳು, ಸಾಂಸ್ಕೃತಿಕ ಪ್ರದರ್ಶನಗಳು ಸೇರಿದಂತೆ ಮಾನಸಿಕ ಒತ್ತಡ ನಿವಾರಿಸಲು ಯೋಗ ದಿನದಂದೇ ಹಲವು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್ ಕುಮಾರ್ ಮಾತನಾಡಿ, ಯೋಗದ ಗುರಿಯು ಕೇವಲ ದೇಹವನ್ನು ಸರಿಪಡಿಸುವುದು ಮಾತ್ರವಲ್ಲ, ಮನಸ್ಸು, ದೇಹ ಮತ್ತು ಆತ್ಮ ಸೇರಿದ ಎಲ್ಲ ಮೂರೂ ಅಂಶಗಳನ್ನು ಶುದ್ದೀಕರಿಸಲು ನೆರವಾಗುತ್ತದೆ. ಇದು ನಮ್ಮ ಮತ್ತು ಪ್ರಕೃತಿ ಮಾತೆಯ ಜೊತೆ ಸಂಪರ್ಕವನ್ನು ಕಲ್ಪಿಸುತ್ತದೆ. ಇದು ನಮ್ಮನ್ನು ನಮ್ಮ ನೈಜತೆಯ ಹತ್ತಿರಕ್ಕೆ ಕೊಂಡೊಯ್ಯುತ್ತದೆ ಎಂದು ವಿವರಿಸಿದರು.

ಯೋಗವು ವ್ಯಾಯಾಮ ಮಾತ್ರವಲ್ಲದೇ ನಮ್ಮೊಂದಿಗೆ, ವಿಶ್ವ ಹಾಗೂ ಪ್ರಕೃತಿಯ ಜೊತೆಗೆ ಏಕತೆಯ ಅರ್ಥವನ್ನು ಕಂಡುಹಿಡಿಯಲು ನೆರವಾಗುತ್ತದೆ. ನಮ್ಮ ಜೀವನ ಶೈಲಿ ಹಾಗೂ ಪ್ರಜ್ಞೆ ರಚಿಸುವ ಮೂಲಕ ಹವಾಮಾನ ಬದಲಾವಣೆ ನಿಭಾಯಿಸಲು ಮತ್ತು ಯೋಗ ಕ್ಷೇಮವನ್ನು ಸುಧಾರಿಸಲು ಸಹಾಯ, ಚಿಂತನೆ, ಕ್ರಿಯೆ, ಸಂಯಮ ಮತ್ತು ಸಾರ್ಥಕತೆಯನ್ನು ಒಗ್ಗೂಡಿಸುತ್ತದೆ. ಹಾಗೇಯೆ ಪ್ರಕೃತಿ ಮತ್ತು ಮನುಷ್ಯನ ನಡುವೆ ಸಾಮರಸ್ಯ ಮೂಡಿಸುತ್ತದೆ. ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿರಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಈ ವೇಳೆ ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶ ಎನ್.ಶ್ರೀಪಾದ್, 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ವಿಜಯಾನಂದ, 2ನೇ ಹೆಚ್ಚುವರಿ ನ್ಯಾಯಾಧೀಶರಾದ ಪ್ರವೀಣ್‌ಕುಮಾರ್, ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವಪ್ಪ ಸಲಗೆರೆ, 2ನೇ ಹೆಚ್ಚುವರಿ ನ್ಯಾಯಾಧೀಶರಾದ ರೇಷ್ಮಾ, 3ನೇ ಹೆಚ್ಚುವರಿ ನ್ಯಾಯಾಧೀಶರಾದ ಅಫ್ತಾಬ್, ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್, ಮಲ್ಲಿಕಾರ್ಜುನ್, ಸಿದ್ದರಾಜು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ.ಬಸವರಾಜು ಗೋಪನಾಳು, ಕಾರ್ಯದರ್ಶಿ ಎಸ್.ಬಸವರಾಜು, ಸಹಕಾರ್ಯದರ್ಶಿ ಎ.ಎಸ್. ಮಂಜುನಾಥ, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಯೋಗ ಮತ್ತು ಚಿಕಿತ್ಸೆ ಹಿರಿಯ ವೈದ್ಯಾಧಿಕಾರಿ ಡಾ.ಮಂದಾಕಿನಿ, ಯೋಗ ತರಬೇತುದಾರ ಮಂಜುನಾಥ್, ಗೀತಾ ಮಂಜುನಾಥ್, ಸಿಇಓ ಬಿ.ಶ್ರೀನಿವಾಸ್, ಕಾರ್ಯಕಾರಿ ಸಮಿತಿ ಸದಸ್ಯರಾದ ಭಾಗ್ಯಲಕ್ಷ್ಮಿ, ಅಜಯ್ ಆವರಗೆರೆ, ಸಂತೋಷ್‌ಕುಮಾರ್, ಚೌಡಪ್ಪ, ನಾಗರಾಜ್, ನೀಲಕಂಠಯ್ಯ ಇತರರು ಇದ್ದರು.

# ಸದೃಢ ಆರೋಗ್ಯಕ್ಕೆ ನಿತ್ಯ ಯೋಗ ಅವಶ್ಯಕ



**ಹರಿಹರದ ಶಾಸಕ ಬಿ.ಪಿ. ಹರೀಶ್**

ಹರಿಹರ, ಜೂ. 21- ದೇಹದಲ್ಲಿ, ಮನಸ್ಸಿನ ಖಿನ್ನತೆ ಶಮನ ಮಾಡಲು ಹಾಗೂ ಸದೃಢ ಆರೋಗ್ಯವನ್ನು ಹೊಂದುವುದಕ್ಕೆ ಪ್ರತಿನಿತ್ಯ ಯೋಗ, ವ್ಯಾಯಾಮ ಮಾಡುವುದು ಅವಶ್ಯಕ ಎಂದು ಶಾಸಕ ಬಿ.ಪಿ. ಹರೀಶ್ ಅಭಿಪ್ರಾಯಪಟ್ಟರು.

ನಗರದ ಶ್ರೀ ಹರಿಹರೇಶ್ವರ ದೇವಾಲಯದ ಆವರಣದಲ್ಲಿ ಪತಂಜಲಿ ಯೋಗ ಕೇಂದ್ರ ಮತ್ತು ತಾಲ್ಲೂಕು ಆಡಳಿತದ ವತಿಯಿಂದ ನಡೆದ ಯೋಗ ದಿನಾಚರಣೆಯನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಸಾರ್ವಜನಿಕರು ಪ್ರತಿನಿತ್ಯ ಯೋಗ ಮಾಡುವುದರಿಂದ ಮನಸ್ಸಿನಲ್ಲಿರುವ ಖಿನ್ನತೆ, ಚಂಚಲತೆಗೆ ಕಡಿವಾಣ ಹಾಕಬಹುದು ಮತ್ತು ದೇಹವನ್ನು ಸದೃಢವಾಗಿ ಇರುವಂತೆ ನೋಡಿಕೊಳ್ಳಲು ಸಹಕಾರಿಯಾಗುತ್ತದೆ. ಕಳೆದ ಹಲವಾರು ವರ್ಷಗಳ ಕೆಳಗೆ ಯೋಗದ ಬಗ್ಗೆ ನಿರ್ಲಕ್ಷ್ಯದ ವಾತಾವರಣ ಸೃಷ್ಟಿಯಾಯಿತು, ಆದರೆ ದೇಶದಲ್ಲಿ ನರೇಂದ್ರ ಮೋದಿಯವರು ಪ್ರಧಾನಿ ಆದ ನಂತರ ಸಾರ್ವಜನಿಕರ ಆರೋಗ್ಯಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕು ಎಂಬ ದೃಷ್ಟಿಯಿಂದ ಯೋಗ ದಿನಾಚರಣೆಗೆ ಹೆಚ್ಚು ಒತ್ತನ್ನು ನೀಡುತ್ತಾ, ಬಂದಿದ್ದರ ಪರಿಣಾಮವಾಗಿ ಇಂದು ವಿಶ್ವ ಮಟ್ಟದಲ್ಲಿ ಯೋಗದ ಬಗ್ಗೆ ಸಾರ್ವಜನಿಕರಿಗೆ ಒಳ್ಳೆಯ ಅಭಿಪ್ರಾಯ ಬಂದು, ವಿಶ್ವದ ಎಲ್ಲಾ ನಗರಗಳಲ್ಲಿ ಯೋಗ ಪ್ರಚಲಿತದಲ್ಲಿರುವುದಕ್ಕೆ ದಾರಿಯಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಪೃಥ್ವಿ ಸಾನಿಕಂ, ಪೌರಾಯುಕ್ತ ಐಗೂರು ಬಸವರಾಜ್, ತಾಪಂ ಇಓ ರವಿಕುಮಾರ್, ಬಿಇಓ ಹನುಮಂತಪ್ಪ, ಡಾ. ಚಂದ್ರಮೋಹನ್, ಎಇಇ ಶಿವಮೂರ್ತಿ, ಗಿರೀಶ್, ದೈಹಿಕ ಶಿಕ್ಷಕಿ ಮಂಜುಳಾ, ತಾಪಂ ವ್ಯವಸ್ಥಾಪಕಿ ಪೂಜಾ, ಪಿಎಸ್ಐ ಚಿದಾನಂದ್, ಎಸ್.ಹೆಚ್. ಹೂಗಾರ್, ನಿರಂಜನ, ರವೀಂದ್ರ ಸಿಂಗ್, ಮೀನಾಕ್ಷಿ, ಜ್ಯೋತಿ, ಕಾರ್ತಿಕ್ ಕುಮಾರ್, ಶಾಂತಕುಮಾರ್, ಸಾಗರ್ ಹಾಗು ಇತರರು ಹಾಜರಿದ್ದರು.

# ವಿಶ್ವಚೇತನ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ದಾವಣಗೆರೆ, ಜೂ. 21- ನಗರದ ವಿಶ್ವಚೇತನ ವಿದ್ಯಾನಿಕೇತನ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಯೋಗ ಶಿಕ್ಷಕ ಆರ್. ಸುರೇಶ್ ಮಾತನಾಡಿ, ವಿಶ್ವಕ್ಕೆ ಯೋಗ ಪರಿಚಯಿಸಿದ್ದು ಭಾರತ. ವಿದ್ಯಾರ್ಥಿಗಳಿಗೆ ಜ್ಞಾಪಕ ಶಕ್ತಿಯನ್ನು ಹೆಚ್ಚಿಸುವ, ಮನಸ್ಸಿಗೆ ಶಾಂತಿ ನೀಡುವ, ಸರ್ವ ರೋಗಗಳನ್ನು ನಿವಾರಣೆ ಮಾಡುವ ಶಕ್ತಿ ಯೋಗಕ್ಕಿದೆ ಎಂದರು.

ದೈಹಿಕ ಮತ್ತು ಮಾನಸಿಕ ಸದೃಢತೆಯನ್ನು ಹೆಚ್ಚಿಸುವ ಹಾಗೂ ದೀರ್ಘಾಯುಷ್ಯಕ್ಕೆ ಯೋಗ ಸಹಕಾರಿ. ಪ್ರತಿಯೊಬ್ಬರೂ ಪ್ರತಿ ನಿತ್ಯ



ಯೋಗವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನ ರೂಢಿಸಿಕೊಳ್ಳಿ ಎಂದು ಕರೆ ನೀಡಿದರು.

ಹಿರಿಯ ಶಿಕ್ಷಕರಾದ ಬಿ. ನಾಗರಾಜ್ ಮತ್ತು ಯೋಗ ಶಿಕ್ಷಕ ಸುರೇಶ್ ಯೋಗ ಪ್ರದರ್ಶಿಸಿದರು. ಪ್ರಾಂಶುಪಾಲರಾದ ಸತ್ಯನಾರಾಯಣ ರೆಡ್ಡಿ, ಮುಖ್ಯೋಪಾಧ್ಯಾಯರಾದ ಬಿ.ಎಂ. ಬಸವ ರಾಜಯ್ಯ, ಶಾಲಾ ಸಿಬ್ಬಂದಿ ಭಾಗವಹಿಸಿದ್ದರು.

# ಯುನೈಟೆಡ್ ನ್ಯಾಷನಲ್ ಶಾಲೆಯಲ್ಲಿ ಯೋಗ ದಿನಾಚರಣೆ

ದಾವಣಗೆರೆ, ಜೂ. 21- ಸಮೃದ್ಧವಾದ ಜೀವನಕ್ಕಾಗಿ ಶಿಕ್ಷಣ ಹೇಗೆ ಮುಖ್ಯವಾಗಿದೆಯೋ ಹಾಗೆಯೇ ಸಮೃದ್ಧವಾದ ದೇಹಕ್ಕಾಗಿ ಯೋಗ ಸಹ ಅಷ್ಟೇ ಮುಖ್ಯವಾಗಿದೆ ಎಂದು ಯೋಗದ ಮಹತ್ವವನ್ನು ಯುನೈಟೆಡ್ ಇಂಟರ್ ನ್ಯಾಷನಲ್ ಶಾಲೆಯ ಪ್ರಾಂಶುಪಾಲ ಎಂ. ವಾಸಿಂ ಪಾಷಾ ತಿಳಿಸಿದರು. ನಗರದ ಯುನೈಟೆಡ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಅವರು ಮಾತನಾಡಿದರು.

ಶಾಲೆಯ ಶಿಕ್ಷಕ ಇಬ್ರಾಹಿಂ ಜಮಖಂಡಿ ಮಾತನಾಡಿ, ವಿಶ್ವಸಂಸ್ಥೆಯಲ್ಲಿ ಯೋಗವನ್ನು ಅಂತರರಾಷ್ಟ್ರೀಯ ದಿನವನ್ನಾಗಿ ಹೇಗೆ ಘೋಷಿಸಲಾಯಿತು ಮತ್ತು ಯೋಗ ಭಾರತದಲ್ಲಿ ಹೇಗೆ ಬೆಳವಣಿಗೆಯಾಯಿತು ಎಂಬುದರ ಬಗ್ಗೆ ವಿವರವಾಗಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು.

ಶಾಲೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ತಾಜ್ ಪ್ಯಾಲೇಸ್ ಮ್ಯಾರೇಜ್ ಹಾಲ್ ಮಾಲೀಕ ಬಿ. ದಾದಾಪೀರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲಾ ಉಪ ಪ್ರಾಂಶುಪಾಲರಾದ ಶ್ರೀಮತಿ ಯಾಸ್ಮೀನ್ ಬಾನು ಹಾಗೂ ಆಡಳಿತಾಧಿಕಾರಿ ಅಶ್ಫಕ್ ಅಹ್ಮದ್, ಶಾಲಾ ಸಂಯೋಜಕ ಶ್ರೀಮತಿ ಶರ್ಫುನ್ನೀಸ ಹಾಗೂ ಮುಖ್ಯಸ್ಥ ಶೋಯೆಬ್ ನಹಿಮಿ ಮತ್ತಿತರರು ಉಪಸ್ಥಿತರಿದ್ದರು.



# ಎಸ್.ಎಸ್. ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ದಾವಣಗೆರೆ, ಜೂ. 21- ಕಾಲೇಜಿನ ವಿದ್ಯಾರ್ಥಿ ಸಂಘದ 'ಕ್ರೀಡಾ ಸಮಿತಿ'ಯ ವತಿಯಿಂದ 9 ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇದೇ ವೇಳೆ ಪ್ರಾಂಶುಪಾಲರಾದ ಡಾ. ಬಿ. ಎಸ್. ಪ್ರಸಾದ್ ಮಾತನಾಡಿ, ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳಾದ ಕೀರ್ತಿಶ್ರೀ, ಸಾಚಿತ್ ಕುಮಾರ್, ಸೌಮ್ಯ ಮತ್ತಿತರೆ ವಿದ್ಯಾರ್ಥಿಗಳೇ ರೂವಾರಿಗಳಾಗಿ ಇತರೆ ಎಲ್ಲಾ ವಿದ್ಯಾರ್ಥಿಗಳಿಗೂ, ಸಿಬ್ಬಂದಿ ವರ್ಗದವರಿಗೂ ಯೋಗಭ್ಯಾಸ ಮಾಡಿಸಿದ್ದು ವಿಶೇಷ ಎಂದರು.

ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಅಂಶಗಳಲ್ಲಿ ಯೋಗದ ಪಾತ್ರ ತುಂಬಾ ಮಹತ್ವದ್ದಾಗಿದೆ. ಆದ್ದರಿಂದ ಯೋಗಾಭ್ಯಾಸವೂ ಒಂದು ದಿನಕ್ಕೆ ಮಾತ್ರ ಸೀಮಿತವಾಗದೇ ದೈನಂದಿನ ಭಾಗವಾಗಬೇಕು ಎಂದು ಅಭಿಮತ ವ್ಯಕ್ತಪಡಿಸಿದರು.

ವೈದ್ಯಕೀಯ ನಿರ್ದೇಶಕರಾದ ಡಾ.ಅರುಣ್ ಕುಮಾರ್ ಅಜ್ಜಪ್ಪ, ಉಪಪ್ರಾಂಶುಪಾಲರಾದ ಡಾ. ಶಶಿಕಲಾ ಪಿ ಕೃಷ್ಣಮೂರ್ತಿ, ವಿದ್ಯಾರ್ಥಿ ಸಂಘದ ಚೇರ್ಮನ್ ಡಾ. ಹರೀಶ್ ಕುಮಾರ್ ವಿ.ಎಸ್, ಉಪಚೇರ್ಮನ್ ಡಾ.ವೆಂಕಟೇಶ್ ಬಿ.ಕೆ, ಕ್ರೀಡಾ ಸಮಿತಿಯ ಚೇರ್ಮನ್ ಡಾ. ಪಾರ್ಥ ಸಾರಥಿ ಕೆ.ಆರ್ ಉಪಚೇರ್ಮನ್ ಗಳಾದ ಡಾ.ಪ್ರದೀಪ್ ಎ. ಎನ್ ಡಾ. ಮನು, ಡಾ. ನಿಖಿಲ್, ಹಾಗೂ ಕ್ರೀಡಾ ಸಮಿತಿಯ ಸದಸ್ಯರು ಭಾಗವಹಿಸಿದ್ದರು.

# ಜೈನ್ ಕಾಲೇಜಿನಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ. 21- ನಗರದ ಜೈನ್ ತಾಂತ್ರಿಕ ಮಹಾವಿದ್ಯಾಲಯದ ಎನ್‌ಎಸ್ ಎಸ್ ಘಟಕದ ಸಹಯೋಗದಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು.

ಆನೆಕೊಂಡ ಬಸಪ್ಪ ಶಾಲೆಯ ಯೋಗ ಶಿಕ್ಷಕ ಕೆ.ಸಿ. ಬಸವರಾಜ್ ಯೋಗದ ಮಹತ್ವವನ್ನು ತಿಳಿಸಿಕೊಟ್ಟರು. ಯೋಗದಿಂದ ಹಲವಾರು ಕಾಯಿಲೆಗಳನ್ನು ಗುಣಪಡಿಸಿಕೊಳ್ಳಬಹುದು. ನಮ್ಮ ಜೀವನದಲ್ಲಿ ಉತ್ತಮ ಗುರಿಗಳನ್ನು ಸದೃಢ ಮನಶಕ್ತಿಯಿಂದ ಸಾಧಿಸಬಹುದು. ಅದಕ್ಕೆ ನಿತ್ಯ ಯೋಗ ಪೂರಕವಾಗಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಿ.ಬಿ. ಗಣೇಶ್ ಮಾತನಾಡಿ, ನಿತ್ಯ ಯೋಗ ಮತ್ತು ಪ್ರಾಣಾಯಾಮ ಮಾಡುತ್ತಾ ಉತ್ತಮ ಸಮಾಜವನ್ನು ಕಟ್ಟಬೇಕು ಎಂದು ತಿಳಿಹೇಳಿದರು.

ಕಾರ್ಯಕ್ರಮದ ಸಂಯೋಜಕ ವೀರೇಶ್ ಕುಮಾರ್ ಕೆ.ಎಸ್., ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಹೆಚ್.ಎಂ. ರಾಜೇಶ್ವರಿ, ಯಾಂತ್ರಿಕ ವಿಭಾಗದ ಬಿ.ಹೆಚ್. ಶಿವಯೋಗಿ, ಸಿವಿಲ್ ವಿಭಾಗದ ಸಿ. ಎಲ್. ರಮೇಶ್, ಬೇಸಿಕ್ ಸೈನ್ಸ್ ವಿಭಾಗದ ಎಸ್. ರಘು ಮತ್ತು ಇತರರು ಉಪಸ್ಥಿತರಿದ್ದರು.



## ಮೌನೇಶ್ವರಿ ವಸತಿಯುತ ಶಾಲೆಯಲ್ಲಿ ಯೋಗ ದಿನಾಚರಣೆ

ದಾವಣಗೆರೆ, ಜೂ. 21- ಮೌನೇಶ್ವರಿ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆಯಲ್ಲಿ ಯೋಗ ದಿನಾಚರಣೆ ಪ್ರಯುಕ್ತ ಶಾಲಾ ಮಕ್ಕಳು ಪಾಲ್ಗೊಂಡು ಯೋಗ ಮಾಡಿದರು.



## ನಗರದ ಜೈನ್ ವಿದ್ಯಾಲಯದಲ್ಲಿ ಯೋಗ ದಿನಾಚರಣೆ

ದಾವಣಗೆರೆ, ಜೂ. 21 - ನಗರದ ಜೈನ್ ವಿದ್ಯಾಲಯದ ಸಿ.ಬಿ.ಎಸ್.ಇ., ವಿಭಾಗ, ರಾಜ್ಯ ಪಠ್ಯಕ್ರಮ ವಿಭಾಗ ಮತ್ತು ಕಾಲೇಜು ವಿಭಾಗಗಳಿಂದ 9ನೇ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ಯೋಗದ ಉದ್ದೇಶ ಮತ್ತು ಅದರ ಮಹತ್ವವನ್ನು ಯೋಗ ಗುರು ಅಜ್ಜಪ್ಪ ಅವರು ಮಕ್ಕಳಿಗೆ ವಿವರಿಸಿದರು. 9ನೇ ತರಗತಿಯ ವಿದ್ಯಾರ್ಥಿ ಮಲ್ಲಿಕಾರ್ಜುನ ಮಾಳಗಿ ಯೋಗಾಸನದ ವಿವಿಧ ಭಂಗಿಗಳನ್ನು ಪ್ರದರ್ಶಿಸಿದರು.



# ಶಾಲೆಗಳಲ್ಲಿ ನಿತ್ಯ ಯೋಗ-ಧ್ಯಾನ ಕಡ್ಡಾಯಗೊಳಿಸಿ

## ಮಲೇಬೆನ್ನೂರಿನಲ್ಲಿನ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಬೆಣ್ಣೆಹಳ್ಳಿ ಹಾಲೇಶಪ್ಪ





ಮಲೇಬೆನ್ನೂರು, ಜೂ. 21- ಯೋಗ ನಮ್ಮ ಬದುಕಿನ ಭಾಗವಾಗಬೇಕು. ಎಲ್ಲಾ ಶಾಲೆಗಳಲ್ಲಿ ಪ್ರತಿದಿನ ಯೋಗವನ್ನು ಕಡ್ಡಾಯಗೊಳಿಸಬೇಕೆಂದು ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಹೇಳಿದರು.

ಅವರು ಬುಧವಾರ ಇಲ್ಲಿನ ನೀರಾವರಿ ಇಲಾಖೆಯ ರೈತ ಭವನದಲ್ಲಿ ಪತಂಜಲಿ ಯೋಗ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 9ನೇ ವರ್ಷದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಶಾಲಾ ಮಕ್ಕಳಿಗೆ ಆಟ, ಪಾಠದ ಜೊತೆಗೆ ಯೋಗ, ಧ್ಯಾನದ ಬಗ್ಗೆ ತಿಳಿಸಿಕೊಡಬೇಕು. ಮನೆಯಲ್ಲಿ ಪ್ರತಿಯೊಬ್ಬರೂ ಸ್ವಲ್ಪಹೊತ್ತು ಯೋಗ, ಧ್ಯಾನ ಮಾಡುವುದರಿಂದ ಮನಸ್ಸಿಗೆ ಸಮಾಧಾನ ಹಾಗೂ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಹಾಲೇಶಪ್ಪ ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಮಂಜುನಾಥ್ ಪಟೇಲ್ ಮಾತನಾಡಿ, ಯೋಗದಿಂದ ಆರೋಗ್ಯ ಅಷ್ಟೇ ಅಲ್ಲ, ಸಮಾಜದಲ್ಲಿ ಸಾಮರಸ್ಯ ಬೆಳೆಯಲಿದೆ ಎಂದರು. ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಪತ್ರಕರ್ತರಾದ ಜಿಗಳಿ ಪ್ರಕಾಶ್, ಬಿ.ಪಿ. ದೇವರಾಜ್,

**ನಿಮಗೆ ಎಷ್ಟೇ ಒತ್ತಡವಿದ್ದರೂ ದಿನದ ಸ್ವಲ್ಪ ಹೊತ್ತು ಯೋಗ-ಧ್ಯಾನ ಮಾಡಿ**
**-ಬ್ರಹ್ಮಾಕುಮಾರಿ ಮಂಜುಳಾಜಿ**

ಹೆಚ್.ಎಂ. ಸದಾನಂದ್, ಪಿಡಬ್ಲ್ಯೂಡಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಮಾತನಾಡಿ ಮುಂದಿನ ವರ್ಷ ಪೂರ್ವಭಾವಿ ಸಭೆ ಮಾಡಿ ಎಲ್ಲರೂ ಸೇರಿ ಒಂದೇ ಕಡೆ ದೊಡ್ಡ ಮಟ್ಟದಲ್ಲಿ ಯೋಗ ದಿನಾಚರಣೆ ಮಾಡೋಣ ಎಂದರು.

ಕರಾಟೆ ತರಬೇತುದಾರ ಕುಂಬಳೂರಿನ ಹೊರಟ್ಟಿ ಅನಿಲ್‌ಕುಮಾರ್ ಮಾತನಾಡಿ, ಕರಾಟೆ, ಯೋಗದಿಂದ ದೇಹಕ್ಕೆ ಶಕ್ತಿ ಬರುತ್ತದೆ ಎಂದರು. ಯೋಗ ಹಾಗೂ ಕ್ರೀಡಾಪಟುಗಳಾದ ವೈಷ್ಣವಿ, ಭಾಸ್ಕರ್ ತಮ್ಮ ಅನುಭವ ಹಂಚಿಕೊಂಡರು.

ಕಾರ್ಯಕ್ರಮದ ಸಂಘಟಕರಾದ ಅಂಗನವಾಡಿ ಶಿಕ್ಷಕಿ ಶ್ರೀಮತಿ ಮಂಜುಳಾ ಪ್ರಾಸ್ತಾವಿಕವಾಗಿ ಮಾತನಾಡಿ ಕಳೆದ 9 ವರ್ಷಗಳಿಂದ ಇಲ್ಲಿ ಯೋಗ ದಿನಾಚರಣೆಯನ್ನು ನಡೆಸಿಕೊಂಡು ಬಂದಿದ್ದು, ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿ, ನಂತರ ಯೋಗಾಭ್ಯಾಸ ಮಾಡಿಸಿದರು.

ಅಕ್ಕನ ಬಳಗದ ಅಧ್ಯಕ್ಷೆ ಸರೋಜಮ್ಮ ಡಾ. ಎಂ.ಜಿ. ರಂಗನಾಥ್, ಬಸವ ಬಳಗದ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಚಂದ್ರಮ್ಮ, ಬಾಲವಿಕಾಸ ಸಮಿತಿ ಅಧ್ಯಕ್ಷೆ ಮಾನಸ ತಿಪ್ಪೇಶ್, ಡಿಷ್ ರುದ್ರೇಶ್ ಸೇರಿದಂತೆ ಅಕ್ಕನ ಬಳಗದ ಸದಸ್ಯರು, ಶಾಲಾ ಮಕ್ಕಳು ಭಾಗವಹಿಸಿದ್ದರು.

**ಈಶ್ವರೀಯ ವಿವಿಯಲ್ಲಿ ಯೋಗ ದಿನಾಚರಣೆ :** ಪಟ್ಟಣದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾ ಜಿ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಯೋಗ-ಧ್ಯಾನ ಅಧ್ಯಾತ್ಮದ ಭಾಗವಾಗಿದ್ದು, ಎಷ್ಟೇ ಒತ್ತಡವಿದ್ದರೂ ದಿನದ ಸ್ವಲ್ಪ ಹೊತ್ತು ಯೋಗ-ಧ್ಯಾನ ಮಾಡಿ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು ಎಲ್ಲರಿಗೂ ಯೋಗ ದಿನಾಚರಣೆಯ ಶುಭ ಕೋರಿದರು.

ಎಸ್‌ಬಿಕೆಎಂ ಶಾಲೆಯ ದೈಹಿಕ ಶಿಕ್ಷಕ ರೇವಣಸಿದ್ದಪ್ಪ ಯೋಗಾಭ್ಯಾಸ ಮಾಡಿಸಿದರು.

# ಶಾಸಕರಿಗೆ ಮೂರು ದಿನ ತರಬೇತಿ

ಬೆಂಗಳೂರು, ಜೂ. 21 - ಹದಿನಾರನೇ ವಿಧಾನಸಭೆಗೆ ನೂತನವಾಗಿ ಆಯ್ಕೆಯಾಗಿರುವ 70 ಶಾಸಕರಿಗೆ 3 ದಿನಗಳ ಕಾಲ ಪ್ರಕೃತಿ ಚಿಕಿತ್ಸೆ ಮತ್ತು ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್, ನೆಲಮಂಗಲ ಬಳಿ ಇರುವ ಧರ್ಮಸ್ಥಳದ ನ್ಯಾಚುರೋಪತಿ ಕೇಂದ್ರದಲ್ಲಿ ಶಾಸಕರ ತರಬೇತಿ ಶಿಬಿರ ನಡೆಯಲಿದೆ. ಜೂನ್ 26ರಿಂದ 28ರವರೆಗೆ ಶಿಬಿರ ನಡೆಯಲಿದೆ. ಹೊಸ ಶಾಸಕರು ಜೂ.25ರ ಮಧ್ಯಾಹ್ನದಿಂದ ಸಂಜೆವರೆಗೆ ನೋಂದಣಿ ಮಾಡಿಸಿಕೊಳ್ಳಬೇಕು. ಜೂ.26 ರ ಬೆಳಿಗ್ಗೆ ಆರೋಗ್ಯ ತಪಾಸಣೆ ನಡೆಯಲಿದ್ದು, ಅಂದು ಬೆಳಿಗ್ಗೆ 10 ಗಂಟೆಯಿಂದ ತರಬೇತಿ ಪ್ರಾರಂಭವಾಗಲಿದ್ದು, ಹಿರಿಯ ಶಾಸಕರು ಸಂಸದೀಯ ನಡವಳಿಕೆಗಳ ಕುರಿತು ಮಾರ್ಗದರ್ಶನ ಮಾಡಲಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಶಿಬಿರದ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಕ್ಕೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕಾನೂನು ಸಚಿವರು ಆಗಮಿಸಲಿದ್ದಾರೆ ಎಂದರು.

ತರಬೇತಿ ಅವಧಿಯಲ್ಲಿ ನಿತ್ಯ ಸಂಜೆ ಸಂವಾದ ಕಾರ್ಯಕ್ರಮ ಇರಲಿದ್ದು, ಮುಖ್ಯಮಂತ್ರಿ ಸಿದ್ಧರಾಮಯ್ಯ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಹೆಚ್.ಡಿ.ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಒಂದೊಂದು ದಿನ ಸಂವಾದ ನಡೆಸಲಿದ್ದಾರೆ.

ಹಿರಿಯ ಸದಸ್ಯರಿಂದ ಕಿರಿಯರಿಗೆ ಅನುಭವದ ಮಾರ್ಗದರ್ಶನ ದೊರೆಯಲಿ ಎಂಬ ಕಾರಣಕ್ಕೆ ಸಂವಾದ ಏರ್ಪಡಿಸಲಾಗಿದೆ. ತರಬೇತಿ ಶಿಬಿರದ ಕೊನೆಯ ದಿನ ಎಲ್ಲಾ ಸಚಿವರಿಗೂ ಆಹ್ವಾನ ನೀಡಲಾಗಿದೆ. ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡುವ ಭಾಷಣ, ಬಜೆಟ್ ಮಂಡನೆ, ಅಂಗೀಕಾರ, ಶಾಸನ ರಚನೆ ಮೊದಲಾದ ವಿಚಾರಗಳ ಬಗ್ಗೆ ಹಿರಿಯ ಸದಸ್ಯರು ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಪತ್ರಿಕಾ ರಂಗ-ಶಾಸಕರು ಹೇಗಿರಬೇಕೆಂಬ ವಿಚಾರದ ಬಗ್ಗೆ ಪಿಆರ್‌ಎಸ್ ಸಂಸ್ಥೆ ಮಾಹಿತಿ ಕೊಡಲಿದೆ. ಜೂ.28ಕ್ಕೆ ಸಮಾರೋಪ ಕಾರ್ಯಕ್ರಮ ನಡೆಯಲಿದೆ ಎಂದರು.

ಜುಲೈ 3ರಿಂದ ಜು.14 ರವರೆಗೆ 10 ದಿನಗಳ ಕಾಲ ವಿಧಾನಸಭೆ ಅಧಿವೇಶನ ನಡೆಯಲಿದ್ದು, ಮೊದಲ ದಿನ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಎಂದು ಖಾದರ್ ಇದೇ ಸಂದರ್ಭದಲ್ಲಿ ತಿಳಿಸಿದರು.

# ಎಸ್ಸೆಸ್ ಜನ್ಮದಿನಕ್ಕೆ ಕಸಾಪ ಶುಭಾಶಯ

ದಾವಣಗೆರೆ, ಜೂ. 21- ಶಾಸಕ ಶಾಮನೂರು ಶಿವಶಂಕರಪ್ಪ ಅವರ 93ನೇ ವರ್ಷದ ಹುಟ್ಟುಹಬ್ಬದ



ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ನೇತೃತ್ವದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಅವರ ಸ್ವಗೃಹಕ್ಕೆ ತೆರಳಿ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, 93ನೇ ವಯಸ್ಸಿನಲ್ಲೂ ಯುವಕರೂ ನಾಚುವಂತೆ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ. ಅವರ ಸೇವೆ ನಮ್ಮ ನಾಡಿಗೆ ಹೀಗೆ ಮುಂದುವರೆಯಲಿ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ, ದಾವಣಗೆರೆ ತಾಲ್ಲೂಕು ಕ.ಸಾ.ಪ. ಅಧ್ಯಕ್ಷೆ ಶ್ರೀಮತಿ ಸುಮತಿ ಜಯಪ್ಪ, ಜಿಲ್ಲಾ ಪದಾಧಿಕಾರಿಗಳಾದ ಶ್ರೀಮತಿ ಮಲ್ಲಮ್ಮ ಭೈರೇಶ್, ಶ್ರೀಮತಿ ರುದ್ರಾಕ್ಷಿಬಾಯಿ, ಶ್ರೀಮತಿ ಜ್ಯೋತಿ ಉಪಾಧ್ಯಾಯ, ಎನ್.ಎಸ್. ರಾಜು, ಸುದರ್ಶನ್, ತಾಲ್ಲೂಕು ಕಾರ್ಯದರ್ಶಿ ನಾಗರಾಜ್ ಸಿರಿಗೆರೆ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಇತರರಿದ್ದರು.

# ಶಿಕ್ಷಣ ಸಚಿವರನ್ನು ಭೇಟಿ ಮಾಡಿದ ಎಐಡಿಎಸ್‌ಓ ನಿಯೋಗ

ದಾವಣಗೆರೆ, ಜೂ. 21- ಎನ್‌ಇಪಿ ಅನುಷ್ಠಾನದ ಹಿನ್ನೆಲೆಯಲ್ಲಿ 13,800 ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಹೊರಟಿದ್ದ ಹಿಂದಿನ ಬಿಜೆಪಿ ಸರ್ಕಾರದ ಆದೇಶವನ್ನು ರದ್ದುಗೊಳಿಸುವಂತೆ ಎಐಡಿಎಸ್‌ಓ ರಾಜ್ಯ ಸಮಿತಿಯ ನಿಯೋಗ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಸಾರ್ವಜನಿಕ ಶಿಕ್ಷಣ ಉಳಿಸಲು, ಎನ್‌ಇಪಿ 2020 ಪ್ರತಿರೋಧಿಸಲು ನಮ್ಮ ರಾಜ್ಯದಲ್ಲಿ 35 ಲಕ್ಷ ಸಹಿ ಸಂಗ್ರಹಣೆ ಆದದ್ದನ್ನು ಸಚಿವರ ಗಮನಕ್ಕೆ ತಂದು ಶಿಕ್ಷಣ ವ್ಯವಸ್ಥೆ ಬಲಪಡಿಸುವಂತೆ ವಿನಂತಿಸಿಕೊಳ್ಳಲಾಯಿತು.

ಅಂತೆಯೇ ಪಠ್ಯ ಕ್ರಮದ ಮೂಲಕ ಶಾಲೆಗಳಲ್ಲಿ ಧರ್ಮ ನಿರಪೇಕ್ಷ ವಾತಾವರಣ ಕಾಪಾಡುವಂತೆ ಮನವಿ ಸಲ್ಲಿಸಲಾಯಿತು. ಎಲ್ಲಾ ಬೇಡಿಕೆಗಳಿಗೆ ಸಚಿವರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿ, ಎನ್‌ಇಪಿ 2020 ಇದರಿಂದ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸುವ ಭರವಸೆಯನ್ನು ಸಚಿವರು ನೀಡಿದ್ದಾರೆಂದು ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ. ನಿಯೋಗದಲ್ಲಿ ರಾಜ್ಯ ಸಮಿತಿ ಸದಸ್ಯರಾದ ಅಪೂರ್ವ, ಕಲ್ಯಾಣ್ ಮತ್ತಿತರರು ಇದ್ದರು.

# ಮತಾಂತರ ನಿಷೇಧ ಕಾಯ್ದೆ ಹಿಂಪಡೆಯುವ ಸರ್ಕಾರದ ನಿರ್ಧಾರ ಖಂಡಿಸಿ ವಿಹೆಚ್‌ಪಿ ಪ್ರತಿಭಟನೆ




ದಾವಣಗೆರೆ, ಜೂ. 21- ಮತಾಂತರ ನಿಷೇಧ ಕಾಯ್ದೆ ಹಿಂಪಡೆಯಲು ತೀರ್ಮಾನಿಸಿರುವುದನ್ನು ಖಂಡಿಸಿ, ವಿಶ್ವ ಹಿಂದೂ ಪರಿಷದ್, ಭಜರಂಗ ದಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು ಗಾಂಧಿ ವೃತ್ತ, ಪಿ.ಬಿ. ರಸ್ತೆಯ ಮೂಲಕ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಇದೇ ವೇಳೆ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಚನ್ನಗಿರಿ ಮಂಜಣ್ಣ ಮಾತನಾಡಿ, ನಮ್ಮನ್ನಾಳುತ್ತಿರುವ ರಾಜಕೀಯ ಪಕ್ಷಗಳು ಹಿಂದೂಗಳನ್ನು ಕಡೆಗಣಿಸುತ್ತಲೇ ಬಂದಿದ್ದು, ಹಿಂದೂ ಸಮಾಜವನ್ನು ಉಳಿಸುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ನಾಶ ಮಾಡಲೇಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಪ್ರತಿಯೊಬ್ಬರೂ ಕೂಡ ಜಾಗೃತ ಹಿಂದೂ ಸಮಾಜ ನಿರ್ಮಾಣದ ಸಂಕಲ್ಪ ಮಾಡಬೇಕಾಗಿದೆ. ದೇಶ ವಿರೋಧಿ ಚಟುವಟಿಕೆಗಳಿಗೆ ಅವಕಾಶ ನೀಡದೇ ಹಿಂದೂಗಳ ರಕ್ಷಣೆಗೆ ಕಂಕಣಬದ್ಧರಾಗಿ ನಿಲ್ಲಬೇಕಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿರುವುದು ಕೇವಲ ಅಲ್ಪಸಂಖ್ಯಾತರಲ್ಲ. ಹಿಂದೂಗಳು ಸಹ ಹಾಕಿದ್ದಾರೆಂಬುದನ್ನು ಸರ್ಕಾರ ಮರೆಯಬಾರದು. ಜಗತ್ತು ಉಳಿಯಬೇಕಾದರೆ ಕಾಂಗ್ರೆಸ್ ಮುಕ್ತ ಭಾರತ ಮಾಡಬೇಕಾಗಿದೆ ಎಂದರು.

ವಿಶ್ವ ಹಿಂದೂ ಪರಿಷತ್ ಮುಖಂಡ ಸತೀಶ್ ಪೂಜಾರಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದೆ. ಕೇವಲ ಅಲ್ಪಸಂಖ್ಯಾತರನ್ನು ತುಷ್ಟೀಕರಿಸುವ ಸಲುವಾಗಿ ಮತಾಂ ತರ ನಿಷೇಧ ಕಾಯ್ದೆ ಹಿಂಪಡೆಯುವ ಸರ್ಕಾರದ ಕ್ರಮ ಅತ್ಯಂತ ಖಂಡನೀಯ. ಈ ಕೂಡಲೇ ನಿರ್ಧಾರವನ್ನು ಕೈಬಿಡದಿದ್ದರೆ ಉಗ್ರ ಹೋರಾಟಕ್ಕೆ ಸಜ್ಜಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಿಂದೂಗಳನ್ನು ಮತಾಂತರದಿಂದ ರಕ್ಷಿಸಿ ನಮ್ಮ ಧರ್ಮವನ್ನು ಕಾಪಾಡುವುದು ಪ್ರತಿಯೊಬ್ಬ ಹಿಂದೂ ನಾಗರಿಕನ ಕರ್ತವ್ಯವಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವುದು ಕೇವಲ ಅಲ್ಪಸಂಖ್ಯಾತರಿಂದಲ್ಲ. ಅತಿ ಹೆಚ್ಚು ಹಿಂದೂಗಳ ಮತ ಪಡೆದು. ಇಂತಹ ಹಿಂದೂಗಳಿಗೆ ದ್ರೋಹ ಬಗೆಯುವ ಕೆಲಸ ಮಾಡದಿರಿ ಎಂದು ಗುಡುಗಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಎಸ್. ಜಗದೀಶ್, ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ವಿಹೆಚ್‌ಪಿ, ಭಜರಂಗದಳ, ಬಿಜೆಪಿ ಮುಖಂಡರಾದ ಸಿ.ಎಸ್. ರಾಜು, ಮಲ್ಲಿಕಾರ್ಜುನ ಅಂಗಡಿ, ಸಿದ್ದೇಶ್, ಕುಮಾರ್, ಉಮೇಶ್, ಶಿವನಗೌಡ ಪಾಟೀಲ್, ಟಿಂಕರ್ ಮಂಜಣ್ಣ, ಮಂಜಾನಾಯ್ಕ, ವಿನಾಯಕ ರಾನಡೆ, ಶಂಭುಲಿಂಗಪ್ಪ, ಎಲ್.ಡಿ. ಗೋಣೆಪ್ಪ, ಶಿವಪ್ರಕಾಶ್, ಪ್ರಭು ಕಲ್ಬುರ್ಗಿ, ಕಲ್ಯಾಣಮ್ಮ ಮತ್ತಿತರರು ಉಪಸ್ಥಿತರಿದ್ದರು.




## ಚಾಣಕ್ಯ ಕಾಲೇಜಿನಲ್ಲಿ ವಿಶ್ವ ಯೋಗ ದಿನಾಚರಣೆ

ದಾವಣಗೆರೆ, ಜೂ. 21- ಇಂದಿನ ಆಧುನಿಕ ಶೈಲಿಯ ಜೀವನ ಪದ್ಧತಿಯಲ್ಲಿ ಕಲ್ಮಶ ಪೂರಿತವಾಗಿರುವಂತಹ ಆರೋಗ್ಯದ ಈ ಸಂದರ್ಭದಲ್ಲಿ ಯೋಗ ಸಂಜೀವಿನಿಯಾಗಿ ಕೆಲಸ ಮಾಡುತ್ತದೆ ಎಂದು ಯೋಗ ಶಿಕ್ಷಕ ಮಾರುತಿ ಅಭಿಪ್ರಾಯಪಟ್ಟರು.

ನಗರದ ಚಾಣಕ್ಯ ಕಾಲೇಜು ಎನ್‌ಎಸ್‌ಎಸ್ ಘಟಕ ಹಾಗೂ ಪ್ರೇರಣ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ದಿನದಂದು ಅವರು ಮಕ್ಕಳಿಗೆ ಯೋಗ ಕಲಿಸಿ ಯೋಗದ ಉಪಯುಕ್ತತೆ ತಿಳಿಸುತ್ತಿದ್ದರು. ಸದೃಢ ದೇಹ ಹಾಗೂ ಸದೃಢ ಮನಸ್ಸಿಗೆ ಯೋಗ ಅತ್ಯವಶ್ಯಕ. ಮನಸ್ಸು ಶಾಂತ ಚಿತ್ತತೆಯಿಂದ ವರ್ತಿಸಲು, ಮುಂಬರುವ ಸವಾಲುಗಳನ್ನು ಎದುರಿಸಲು ಯೋಗ ಪರಿಣಾಮಕಾರಿ ಎಂದರು.

ಯೋಗ ಎನ್ನುವ ಯುಜ್ ಎನ್ನುವ ಸಂಸ್ಕೃತ ಶಬ್ದದಿಂದ ಬಂದಿದೆ. ಅಂದರೆ ಆತ್ಮವನ್ನು ಪರಮಾತ್ಮನೊಂದಿಗೆ ಜೋಡಿಸು ಎಂದರ್ಥ. ಹಾಗಾಗಿ ವಿದ್ಯಾರ್ಥಿಗಳು ಇಂದಿನ ಬದುಕಿನ ಶೈಲಿಯಲ್ಲಿ ಯೋಗವನ್ನು ಅಳವಡಿಸಿಕೊಂಡು ಉತ್ತಮ ಆರೋಗ್ಯಕರ ಸಮಾಜಕ್ಕೆ ಬದ್ಧರಾಗಬೇಕೆಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಚಾಣಕ್ಯ ಎಜುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಡಿ.ವಿ. ನಾಗರಾಜ್ ಶೆಟ್ಟಿ, ಚಾಣಕ್ಯ ಕಾಲೇಜಿನ ಪ್ರಾಚಾರ್ಯ ಕೆ. ರಾಜಶೇಖರ್, ಡೀನ್ ಬಿ.ಆರ್.ಟಿ. ಸ್ವಾಮಿ, ಪ್ರೇರಣ ಅಕಾಡೆಮಿಯ ಅಧ್ಯಕ್ಷ ಜಿ.ಬಿ. ಲೋಹಿತ್ ಕುಮಾರ್ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ನಗರದಲ್ಲಿ ಇಂದು ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಇಂದು ಚಿಂತನೆ ಮತ್ತು ಸಂವಾದ ನಡೆಯಲಿದೆ. ಗಾಂಧೀಜಿಯವರ ಸರಳ ಜೀವನ ಮತ್ತು ಶ್ರೇಷ್ಠ ಚಿಂತನೆ ವಿಷಯ ಕುರಿತು ಚಿಂತಕ ಆವರಗೆರೆ ರುದ್ರಮುನಿ ಮಾತನಾಡಲಿದ್ದಾರೆ.

ಈ ಸಂದರ್ಭದಲ್ಲಿ ಶಿವನಕೆರೆ ಬಸವಲಿಂಗಪ್ಪ, ಡಾ. ರಾಘವನ್, ನಿರಂಜನ್, ಪ್ರೊ. ಎಂ. ಬಸವರಾಜ್, ನಲ್ಕುಂದ ಹಾಲೇಶಪ್ಪ, ಡಾ. ನಾಗರಾಜ್ ಆಚಾರ್, ಗುರುಮೂರ್ತಿ, ಎಂ. ಗಂಗಾಧರಪ್ಪ, ರೇಖಾ ಮಹಾರುದ್ರಪ್ಪ, ಎಂ.ಎಸ್. ಕೃಷ್ಣ, ಹೆಚ್.ಕೆ. ಚನ್ನಪ್ಪ, ಹೆಚ್. ಚಿದಾನಂದ, ಮಲ್ಲಾಬಾದಿ ಬಸವರಾಜ್, ವೆಂಕಟರ ಮಣ ರೆಡ್ಡಿ ಉಪಸ್ಥಿತರಿರುವರು.



## ಹರಿಹರ : ಪರಿಶಿಷ್ಟರಿಗೆ ಗ್ರಾ.ಪಂ. ಅಧ್ಯಕ್ಷ ಸ್ಥಾನ ಮೀಸಲಿಡಲು ಮನವಿ

ಹರಿಹರ, ಜೂ. 21 - ತಾಲ್ಲೂಕಿನ ಹರಳಹಳ್ಳಿ, ಕೆ.ಬೇವಿನಹಳ್ಳಿ ಹಾಗೂ ಭಾನುವಳ್ಳಿ ಗ್ರಾಮ ಪಂಚಾಯ್ತಿಗಳ ಅಧ್ಯಕ್ಷ ಸ್ಥಾನವನ್ನು ಮುಂದಿನ 30 ತಿಂಗಳ ಅವಧಿಗೆ ಪರಿಶಿಷ್ಟ ಜಾತಿಗೆ ಮೀಸಲು ನಿಗದಿ ಮಾಡಲು ಆಗ್ರಹಿಸಿ, ದಲಿತ ಸಂಘರ್ಷ ಸಮಿತಿಯಿಂದ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ಆಗ್ರಹಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ಇವರಿಗೆ ಮನವಿ ನೀಡಲಾಯಿತು. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ಹರಿಹರ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್, ಕೆ.ಬೇವಿನಹಳ್ಳಿ ಗ್ರಾಪಂ ಸದಸ್ಯರಾದ ಟಿ.ಕೆ.ಮಹೇಶ್, ಕಡ್ಲೆಗೊಂದಿ ತಿಮ್ಮಣ್ಣ, ಹರಳಹಳ್ಳಿ ಗ್ರಾಪಂ ಸದಸ್ಯ ಮಂಜಪ್ಪ, ಎನ್.ಆರ್. ಅರವಿಂದ, ಕೆ.ಎನ್.ಹೇಮಂತ್ ಮತ್ತಿತರರು ಉಪಸ್ಥಿತರಿದ್ದರು.

## ಓದುಗರ ಪತ್ರ

### ತಪ್ಪು ಮಾಡುವ ಉತ್ತರ ಪತ್ರಿಕೆ ಮೌಲ್ಯ ಮಾಪಕರಿಗೆ ಬೇಕು ಶಿಕ್ಷೆ..!

**ಮಾನ್ಯರೇ,**

ಪಿಯು ಪರೀಕ್ಷೆಯ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ, ಮೌಲ್ಯ ಮಾಪನದಲ್ಲಿ ನಂಬಿಕೆ ಇಲ್ಲದ ಸುಮಾರು 9000 ವಿದ್ಯಾರ್ಥಿಗಳು ರಾಜ್ಯದ ವಿವಿಧ ಭಾಗಗಳಿಂದ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ ಸುಮಾರು 600 ವಿದ್ಯಾರ್ಥಿಗಳ ಅಂಕಗಳು ಹೆಚ್ಚಾಗಿವೆ. 800 ವಿದ್ಯಾರ್ಥಿಗಳ ಅಂಕಗಳು ಕಡಿಮೆಯಾಗಿವೆ ಹಾಗೂ ಕೆಲ ವಿದ್ಯಾರ್ಥಿಗಳು ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದು, ಇಲ್ಲಿಯೂ ಸಹ ಎಡವಟ್ಟಾಗಿದೆ. ಇದು ಮೌಲ್ಯಮಾಪಕರು ತಮಗೆ ವಹಿಸಿದ ಕೆಲಸವನ್ನು ಬೇಕಾಬಿಟ್ಟಿಯಾಗಿ ಮಾಡಿರುವುದು ಕಂಡು ಬರುತ್ತದೆ.

ದ್ವಿತೀಯ ಪಿಯುವಿನಲ್ಲಿ ಪಡೆದ ಅಂಕಗಳು ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವ ಬದಲಾವಣೆಯ ಸಮಯವಾಗಿರುತ್ತದೆ. ಇದು ಮೌಲ್ಯಮಾಪಕರಿಗೆ ಅರಿವಿರುವುದಿಲ್ಲವೇ ? ಇದು ಪ್ರತಿ ವರ್ಷದ ಗೋಳಾಗಿದೆ. ಕೆಲವು ಮೌಲ್ಯ ಮಾಪಕರು ತಾವು ದಿನಕ್ಕೆ ಇಷ್ಟು ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿ ಬಿಸಾಕಿದೆ ಎಂದು ಸಹೋದ್ಯೋಗಿಗಳೊಡನೆ ಕೊಚ್ಚಿಕೊಳ್ಳುತ್ತಾರೆ. ಇವರ ಈ ಕಾರ್ಯದಿಂದ ವರ್ಷಗಟ್ಟಲೇ ಕಷ್ಟಪಟ್ಟ ವಿದ್ಯಾರ್ಥಿಗಳ ಭವಿಷ್ಯಕ್ಕೆ ಪೆಟ್ಟು ಬೀಳುತ್ತಿದೆ. ಹಣ ಉಳ್ಳವರು ಮರು ಮೌಲ್ಯಮಾಪನ, ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸುತ್ತಾರೆ. ಆದರೆ ಬಡ ಮಕ್ಕಳು ಬಂದಷ್ಟೇ ಅಂಕಗಳಿಗೆ ತೃಪ್ತಿ ಪಡಬೇಕು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಇಂತಹ ಪ್ರಕರಣಗಳಲ್ಲಿ ಮೌಲ್ಯ ಮಾಪಕರಿಂದ ದಂಡ ವಸೂಲಿ, ಬಡ್ತಿಗೆ ಕತ್ತರಿ, ಕಪ್ಪು ಪಟ್ಟಿಗೆ ಸೇರಿಸುವ ಅಧಿಕಾರ ಹೊಂದಿದ್ದು, ಆದರೆ ಈ ಮಂಡಳಿಯು ಈ ಅಧಿಕಾರವನ್ನು ಎಷ್ಟರಮಟ್ಟಿಗೆ ಚಲಾಯಿಸಿದೆ ಎಂಬುದೇ ಪ್ರಶ್ನೆ.

ಆದ್ದರಿಂದ ಇಂತಹ ಮೌಲ್ಯ ಮಾಪಕರಿಗೆ ಲೈಫ್‌ಟೈಮ್ ಕಪ್ಪು ಪಟ್ಟಿಗೆ ಸೇರಿಸುವುದಲ್ಲದೇ, ಒಂದು ವರ್ಷ ಸಂಬಳ ರಹಿತ ಕೆಲಸ ಮಾಡುವ ಆದೇಶ ಹೊರಡಿಸಬೇಕು. ಹಾಗೂ ರಾಜ್ಯ ಮಟ್ಟದ ಹಾಗೂ ಪ್ರಾದೇಶಿಕ ಮಟ್ಟದ ಪತ್ರಿಕೆಗಳಲ್ಲಿ ಇಂತಹವರ ಹೆಸರು ಮತ್ತು ಹುದ್ದೆಗಳನ್ನು ಪ್ರಕಟಿಸಬೇಕು. ಯಾವ ಪ್ರಮಾಣದಲ್ಲಿ ತಪ್ಪು ಮಾಡಿರುತ್ತಾರೋ ಆ ಪ್ರಮಾಣಕ್ಕೆ ಅನುಗುಣವಾಗಿ ದಂಡ ಶುಲ್ಕ ವಿಧಿಸಿ, ನೊಂದ ವಿದ್ಯಾರ್ಥಿಗಳಿಗೆ ಆ ಹಣವನ್ನು ನೀಡಬೇಕು, ಆಗಲಾದರೂ ಇಂತಹ ಕಾರ್ಯಗಳನ್ನು ಎಸಗುವ ಮೌಲ್ಯಮಾಪಕರಿಗೆ ಬುದ್ದಿ ಬರಬಹುದು.

**- ಮನು, ದಾವಣಗೆರೆ.**

### ಧನ ಸಹಾಯ ಮಾಡಲು ಮನವಿ..

**ಮಾನ್ಯರೇ,**

ಗೌರಮ್ಮ ಚಂದ್ರಶೇಖರ್ ಆದ ನಾನು, ದಾವಣಗೆರೆ ವಾಸಿಯಾಗಿದ್ದು, ಶೇ.75 ಅಂಗವಿಕಲತೆ ಹೊಂದಿರುತ್ತೇನೆ. ಈಗ ನನ್ನ ಗಂಡನಿಗೂ ಅನಾರೋಗ್ಯ ಕಾಡುತ್ತಿದ್ದು, ಪ್ಯಾಂಕ್ರಟೀಸ್ ಶಸ್ತ್ರ ಚಿಕಿತ್ಸೆ ಮಾಡಿಸಲೇಬೇಕಾಗಿದೆ. ನಾವು ಕಡುಬಡವರಾಗಿದ್ದು, ನಮಗೆ ಹಣದ ತೊಂದರೆ ಇರುವುದರಿಂದ ಸಹಾಯ ಮಾಡಲು ಇಚ್ಛಿಸುವವರು ಈ ಕೆಳಕಂಡ ಖಾತೆಗೆ ಧನ ಸಹಾಯ ಮಾಡುವಂತೆ ಪ್ರಾರ್ಥಿಸುತ್ತೇನೆ.

ಗೌರಮ್ಮ ಎಸ್., ನಂ.62022272117,
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ,
IFSC Code: SBIN0020846,
ಪಿ.ಬಿ.ರೋಡ್, ದಾವಣಗೆರೆ ಶಾಖೆ. ಮೊ: 9731998617.

## ಶಾರದ ಶಾಲೆಯಲ್ಲಿ ಯೋಗ ದಿನ



ದಾವಣಗೆರೆ, ಜೂ.21- ಶಾರದ ಪಬ್ಲಿಕ್ ಸ್ಕೂಲ್‌ನಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು. ಕಾರ್ಯದರ್ಶಿ ರೇಖಾ ಅಧ್ಯಕ್ಷತೆ ವಹಿಸಿದ್ದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಿ.ನೇತ್ರಾವತಿ, ಯೋಗ ಶಿಕ್ಷಕಿ ಶ್ರೀಮತಿ ಜಯಶ್ರೀ, ಶ್ರೀಮತಿ ರಾಧ, ಕುಂತಿದೇವಿ, ಶ್ರೀನಿವಾಸ್ ಹಾಜರಿದ್ದು ಯೋಗ ದಿನಾಚರಣೆಯ ಮಹತ್ವ ವಿವರಿಸಿದರು. ಶ್ರೀಮತಿ ಅನುಜ ಪ್ರಾರ್ಥಿಸಿದರು. ನಾಗವೇಣಿ ಸ್ವಾಗತಿಸಿದರು, ಶ್ರೀಮತಿ ಭಾಗ್ಯ ವಂದಿಸಿದರು.



## ಎಸ್ಸೆಸ್ ಹುಟ್ಟುಹಬ್ಬ : 1 ರೂ.ಗೆ 1 ಟೀ

ದಾವಣಗೆರೆ, ಜೂ. 21 - ಶಾಮನೂರು ಶಿವಶಂಕರಪ್ಪ ಅವರ 93ನೇ ಜನ್ಮದಿನದ ಪ್ರಯುಕ್ತ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಅತಿಥ್ಯ ಕಾಫಿ ಕ್ಲಬ್ ವತಿಯಿಂದ ಸಾರ್ವಜನಿಕರಿಗೆ 1 ರೂ.ಗೆ 1 ಟೀ ವಿತರಿಸಿಸಲಾಯಿತು. ಕಾಂಗ್ರೆಸ್ ಮುಖಂಡ ದಿನೇಶ್ ಕೆ. ಶೆಟ್ಟಿ ಅತಿಥಿಗಳಾಗಿ ಆಗಮಿಸಿದ್ದರು. ಹೋಟೆಲ್‌ನ ಮಾಲೀಕ ಹರ್ಷ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಹಣ, ಅಂತಸ್ತು ಇದ್ದವರು ಶ್ರೀಮಂತರಲ್ಲ ದೈಹಿಕ, ಮಾನಸಿಕ ಆರೋಗ್ಯ ಇದ್ದವರು ನಿಜವಾದ ಶ್ರೀಮಂತರು



## ಹರಪನಹಳ್ಳಿಯಲ್ಲಿ ವಿಶ್ವ ಯೋಗ ದಿನಾಚರಣೆ

ಹರಪನಹಳ್ಳಿ, ಜೂ.21- ಹಣ, ಅಂತಸ್ತು ಇದ್ದವರು ಶ್ರೀಮಂತರಲ್ಲ. ದೈಹಿಕ, ಮಾನಸಿಕ ಆರೋಗ್ಯ ಇದ್ದವರು ನಿಜವಾದ ಶ್ರೀಮಂತರು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಸ್.ಷಣ್ಮುಖನಗೌಡ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆರೋಗ್ಯವನ್ನು ಸ್ವಸ್ಥವಾಗಿಡುವ ಮನದ ಸ್ಥಿತಿಯೇ ಯೋಗ. ಸರ್ವ ರೋಗಗಳ ಗುಣಪಡಿಸುವ ಶಕ್ತಿ ಯೋಗಕ್ಕಿದೆ. ಹಿಂದಿನ ಕಾಲದಲ್ಲಿ ಜನ ಸಾಕಷ್ಟು ಕೆಲಸ ಮಾಡುತ್ತಿದ್ದರು. ಆದರೆ ಇಂದು ಕೆಲಸ ಕಡಿಮೆ ಆಗಿ ಬರೀ ಮಿಷನ್‌ಗಳನ್ನು ಅಳವಡಿಸಿಕೊಂಡು ನಾನಾ ರೋಗಗಳಿಗೆ ತುತ್ತಾಗುತ್ತಿದ್ದು, ಪ್ರತಿಯೊಬ್ಬರಿಗೂ ಯೋಗ ಅವಶ್ಯವಾಗಿದೆ. ಯೋಗ ಕೇವಲ ದಿನಾಚರಣೆಗೆ ಸೀಮಿತವಾಗಬಾರದು, ನಿತ್ಯವೂ ಅಭ್ಯಾಸ ಮಾಡಬೇಕು. ಸದೃಢ ದೇಹದಲ್ಲಿ ಸದೃಢ ಮನಸ್ಸಿನ ನಿರ್ಮಾಣಕ್ಕೆ ಯೋಗಾಸನಗಳು ಸಹಕಾರಿ ಆಗುತ್ತವೆ ಎಂದರು.

ದೈಹಿಕ ನಿರ್ದೇಶಕ ಎಚ್. ಕೊಟ್ರೇಶ್ ಮಾತನಾಡಿ, ಮನುಷ್ಯನ ಜೀವನದಲ್ಲಿ ಆರೋಗ್ಯ ತುಂಬಾ ಮುಖ್ಯ. ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಯೋಗ ಅತ್ಯಂತ ಅವಶ್ಯಕವಾಗಿದೆ. ಯೋಗವನ್ನು ಮಾಡದವನು ಅಯೋಗ್ಯ ಎಂಬ ಭಾವನೆ ಎಲ್ಲರಲ್ಲೂ ಮೂಡುತ್ತದೆ. ಯೋಗ ಒಂದು ಉದ್ಯಮವಾಗಿ ಬೆಳೆಯುತ್ತಿದ್ದು, ಈ ಉದ್ಯಮ ಉದ್ಯಮಗಳಂತೆ ಲಾಭವೇ ಇದರ ಉದ್ದೇಶವಾಗಬಾರದು ಎಂದರು.

ಯೋಗ ಶಿಕ್ಷಕ ಲೋಕೇಶ್, ಉಪನ್ಯಾಸಕರಾದ ನಾಗರಾಜ್, ಕೆ.ಸತೀಶ್, ಶಂಭುಲಿಂಗಪ್ಪ, ಗ್ರಂಥಪಾಲಕರಾದ ನಾಗರತ್ನ ಹೊಸಮನಿ ಸೇರಿದಂತೆ ಇತರರು ಇದ್ದರು.

# ಗೃಹ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆಗೆ ಒತ್ತಾಯ

ದಾವಣಗೆರೆ, ಜೂ. 21- ಗೃಹ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆ, ಕನಿಷ್ಠ ವೇತನ, ಸೂಕ್ತ ಭದ್ರತೆ, ರಜೆ ಸೌಲಭ್ಯ ಸೇರಿದಂತೆ, ಇತರೆ ಬೇಡಿಕೆಗಳನ್ನು ಈಡೇರಿಸಬೇಕು ಎಂಬುದು ಗೃಹ ಕಾರ್ಮಿಕರ ಒತ್ತಾಸೆಯಾಗಿದೆ.

ನಗರದ ರೋಟರಿ ಬಾಲಭವನದಲ್ಲಿ ಅಂತರರಾಷ್ಟ್ರೀಯ ಗೃಹ ಕಾರ್ಮಿಕರ ವೃತ್ತಿ ಸಂಘಟನೆ ವತಿಯಿಂದ ಹಮ್ಮಿಕೊಂಡಿದ್ದ 'ಅಂತರರಾಷ್ಟ್ರೀಯ ಗೃಹ ಕಾರ್ಮಿಕರ ದಿನಾಚರಣೆ' ಕಾರ್ಯಕ್ರಮದಲ್ಲಿ ಗೃಹ ಕಾರ್ಮಿಕರು ತಮ್ಮ ಅಳಲನ್ನು ತೋಡಿಕೊಂಡರು.

ಸಾಮಾಜಿಕ ಭದ್ರತಾ ಕಲ್ಯಾಣ ಕ್ರಮಗಳನ್ನು ಗೃಹ ಕಾರ್ಮಿಕರಿಗೂ ವಿಸ್ತರಿಸಬೇಕು. ಗೃಹ ಕಾರ್ಮಿಕರ ಅಗತ್ಯತೆಗಳನ್ನು ಪೂರೈಸಲು ನಿಧಿಯೊಂದಿಗೆ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಬೇಕು. ಕನಿಷ್ಠ ವೇತನ ಕಡ್ಡಾಯಗೊಳಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಕಾರ್ಮಿಕ ಇಲಾಖೆಯ ಸಿಬ್ಬಂದಿ ಗೋಪಾಲಸ್ವಾಮಿ ಅವರು, ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗೆ ಮತ್ತು ಇತರೆ ಕಾರ್ಮಿಕರಿಗೆ ಇರುವ ಸವಲತ್ತುಗಳನ್ನು ತಿಳಿಸಿದರು.



ಗೃಹ ಕಾರ್ಮಿಕರ ಪರವಾಗಿ ಸುಜಾತ ಮಾತನಾಡಿ, ಮನೆ ಕೆಲಸ ಮಾಡುವವರಿಗೆ ಮಾಲೀಕರು ರಜೆ ಸೌಲಭ್ಯ ನೀಡಬೇಕು. ಕಾರ್ಮಿಕರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಕೀಳಾಗಿ ಕಾಣಬಾರದು ಎಂದು ಹೇಳಿದರು.

ಸಂಘಟಕರ ಪರವಾಗಿ ನಾಗಮ್ಮ ಮಾತನಾಡಿ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಮಾದರಿಯಲ್ಲಿ ಗೃಹ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪಿಸಬೇಕು. ಸರ್ಕಾರದಿಂದ ಸಿಗಬಹುದಾದ ಸವಲತ್ತುಗಳನ್ನು ಗೃಹ ಕಾರ್ಮಿಕರಿಗೂ ನೀಡಬೇಕು. ಮನೆಗಳಲ್ಲಿ ಆದ ಕಳ್ಳತನಗಳ ಆರೋಪಗಳನ್ನು ಗೃಹ ಕಾರ್ಮಿಕರ ಮೇಲೆ ಮಾಡುವುದು ಸರಿಯಲ್ಲ. ಗೌರವ ನೀಡಬೇಕು. ರಜೆ ಸೌಲಭ್ಯ ನೀಡುವಂತೆ ಆಗ್ರಹಿಸಿದರು.

ಅಸಂಘಟಿತ ವಲಯದಲ್ಲಿರುವ ನಮಗೆ ಸೂಕ್ತ ಭದ್ರತೆ ಇಲ್ಲ. ಕಾರ್ಮಿಕ ಇಲಾಖೆಯಿಂದ ಗುರುತಿನ ಚೀಟಿ ಮಾಡಿಸಿದ್ದರೂ ಇದುವರೆಗೂ ಯಾವುದೇ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿಲ್ಲ ಎಂದರು.

ಸತ್ತ ಮೇಲೆ ವಿಮೆ ನೀಡುವ ಬದಲು, ಜೀವಂತವಾಗಿರುವಾಗಲೇ ಗೃಹ ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ಅನುಕೂಲವಾಗುವ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಗೃಹ ಕಾರ್ಮಿಕರ ಚಳವಳಿ ಸಹ ಸಂಯೋಜಕಿ ಸಿಸ್ಟರ್ ನಿಶಾ, ಕೆಡಿಡಬ್ಲ್ಯುಎಂ ಸಹ ಸಂಯೋಜಕ ಬ್ರದರ್ ಜರ್ಸನ್, ಕಾರ್ಮಿಕ ಬಂಧು ಶಿಲ್ಪಾ, ವಿ. ಲಕ್ಷ್ಮೀ, ಮಹಾನಗರ ಪಾಲಿಕೆ 31 ನೇ ವಾರ್ಡ್ ಮುಖಂಡರಾದ ಪಿ.ಎಸ್. ನಾಗರಾಜ್, ಉಷಾ, ಬಸಮ್ಮ, ದುಗ್ಗಮ್ಮ, ಚಿತ್ರಾ, ಬಿಜೆಪಿ ಮುಖಂಡ ಬೊಮ್ಮಣ್ಣ, ನಳಿನಿ ಮತ್ತಿತರರು ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.21- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.80 ರಷ್ಟು ಅಂಕ ಗಳಿಸಿ ಉತ್ತೀರ್ಣರಾದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಅಂತಿಮ ದಿನ. ವಿವರಕ್ಕೆ ಸಂಪರ್ಕಿಸಿ : 98866 14722.

## ರೈಲ್ವೆ ನಿವೃತ್ತ ನೌಕರರ ಸಂಘದ ವಾರ್ಷಿಕ ಸಭೆ

ದಾವಣಗೆರೆ, ಜೂ. 21 - ಮೈಸೂರು ವಿಭಾಗೀಯ ರೈಲ್ವೆ ನಿವೃತ್ತಿದಾರರ ಸಂಘದ ವಾರ್ಷಿಕ ಮಹಾಸಭೆಯು ಇದೇ ದಿನಾಂಕ 25 ರ ಭಾನುವಾರ ಬೆಳಗ್ಗೆ 10-30ಕ್ಕೆ ಮೈಸೂರಿನ ಒಂಟಿಕೊಪ್ಪಲ್ ಸಿ.ಎಫ್.ಟಿ.ಆರ್.ಐ.ಶಾಲೆ ಬಳಿಯ ಶ್ರೀ ರಾಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ನಿವೃತ್ತಿದಾರರ ಹರಿಹರ ಶಾಖೆ ಕಾರ್ಯದರ್ಶಿ ವಿ. ಗಣೇಶಯ್ಯ ತಿಳಿಸಿದ್ದಾರೆ.

# ಷೇರು ಮಾರುಕಟ್ಟೆಯಲ್ಲಿ ಲಾಭಾಂಶ ನೀಡುವ ನೆಪದಲ್ಲಿ 7.27 ಕೋಟಿ ರೂ. ವಂಚನೆ

ದಾವಣಗೆರೆ, ಜು. 21- ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಬರುತ್ತದೆ ಎಂದು ಹೇಳಿ ನೂರಕ್ಕೂ ಹೆಚ್ಚು ಜನರಿಂದ 7, 27, 50, 000 ರೂಪಾಯಿ ಹಣ ಠೇವಣಿ ಮಾಡಿಸಿಕೊಂಡು ವಾಪಸ್ ಕೊಡದೆ ವಂಚನೆ ಮಾಡಿರುವುದಾಗಿ ನಗರದ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಎಂಸಿಸಿ ಬಿ ಬ್ಲಾಕ್‌ನ ಫೋಟೋ ಗ್ರಾಫರ್ ರಮೇಶ್ ಎನ್.ಬಿ. ಎಂಬುವವರು ಈಶ್ವರ್ ಎಂಟರ್ ಪ್ರೈಸಸ್ ಮಾಲೀಕ ರಮೇಶ್, ಛಾಯಾ, ಜಗದೀಶ್ ಎಂಬುವವರ ಮೇಲೆ ವಂಚನೆ ದೂರು ನೀಡಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಪ್ರತಿ ತಿಂಗಳು ಶೇ.4 ರಿಂದ 6ರಷ್ಟು ಲಾಭ ನೀಡುವುದಾಗಿ ಆಸೆ ಹುಟ್ಟಿಸಿದ್ದರಿಂದ ನಾನು 5 ಲಕ್ಷ ರೂ ಠೇವಣಿ ಮಾಡಿದ್ದೆ. ನನ್ನಂತೆ ಇತರರೂ ಸಹ ಇವರ ಬಳಿ ಹಣವನ್ನು ಠೇವಣಿ ಮಾಡಿದ್ದು, ಒಂದೆರಡು ತಿಂಗಳು ಲಾಭಾಂಶ ನೀಡಿ, ನಂತರ ಲಾಭಾಂಶವನ್ನೂ ಕೊಡದೆ ನಾಪತ್ತೆಯಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

# ವಿಶ್ವಸಂಸ್ಥೆ ಯೋಗ ಕಾರ್ಯಕ್ರಮ ಗಿನ್ನಿಸ್ ದಾಖಲೆಗೆ

ನವದೆಹಲಿ, ಜೂ. 21 – ವಿಶ್ವಸಂಸ್ಥೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪಾಲ್ಗೊಂಡಿದ್ದ ಅಂತರರಾಷ್ಟ್ರೀಯ ಯೋಗ ಕಾರ್ಯಕ್ರಮ ಗಿನ್ನಿಸ್ ದಾಖಲೆ ಬರೆದಿದೆ. ಒಂದೇ ಸ್ಥಳದಲ್ಲಿ ಅತಿ ಹೆಚ್ಚು ರಾಷ್ಟ್ರದ ಜನರು ಏಕಕಾಲಕ್ಕೆ ಯೋಗಾಭ್ಯಾಸ ಮಾಡಿರುವುದು ದಾಖಲೆಯಾಗಿದೆ ಎಂದು ಗಿನ್ನೀಸ್ ತಿಳಿಸಿದೆ. ಈ ಯೋಗ ಕಾರ್ಯಕ್ರಮದಲ್ಲಿ ಕನಿಷ್ಠ 135 ದೇಶಗಳ ಜನರು ಪಾಲ್ಗೊಂಡಿದ್ದರು. ಗುಜರಾತ್‌ನ ಸೂರತ್ ನಗರದಲ್ಲಿ ಏಕಕಾಲಕ್ಕೆ 1.53 ಲಕ್ಷ ಜನ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಮತ್ತೊಂದು ದಾಖಲೆಯಾಗಿದೆ. ಈ ಹಿಂದೆ ರಾಜಸ್ಥಾನದ ಕೋಟಾದಲ್ಲಿ 1 ಲಕ್ಷ ಜನ ಯೋಗದಲ್ಲಿ ಪಾಲ್ಗೊಂಡಿದ್ದು ದಾಖಲೆಯಾಗಿತ್ತು.

# ಮಳೆ ಅಭಾವ : ಕತ್ತೆಗಳ ಮದುವೆ ಮಾಡಿದ ಗ್ರಾಮಸ್ಥರು

ಹರಪನಹಳ್ಳಿ, ಜೂ.21- ರಾಜ್ಯದಲ್ಲಿ ಮಳೆ ಅಭಾವ ಸೃಷ್ಟಿಯಾಗಿರುವ ಹಿನ್ನಲೆಯಲ್ಲಿ ಮಳೆಗಾಗಿ ಪ್ರಾರ್ಥಿಸಿ ವಿವಿಧ ಸಾಂಪ್ರದಾಯಿಕ ಆಚರಣೆಗಳನ್ನು ನೆರವೇರಿಸುತ್ತಿದ್ದಾರೆ.

ಪಟ್ಟಣದ ವಾಲ್ಮೀಕಿ ನಗರದ ದೊಡ್ಡಗರಡಿಕೇರಿಯ ದೈವಸ್ಥರೆಲ್ಲ ಸೇರಿ ಮಳೆರಾಯನಿಗಾಗಿ ಕತ್ತೆಗಳ ಮದುವೆ ಮಾಡಿ ವರ್ಷಧಾರೆಗಾಗಿ ಮೊರೆಯಿಟ್ಟಿದ್ದಾರೆ.

ಪಟ್ಟಣದಲ್ಲಿರುವ ಗಂಡು ಮತ್ತು ಹೆಣ್ಣು ಕತ್ತೆಯನ್ನು ಹುಡುಕಿ ಮದುಮಕ್ಕಳಂತೆ ಸಿಂಗರಿಸಿ, ತಾಳಿ ಕಟ್ಟುವ ಶಾಸ್ತ್ರ ನಡೆಸಿದರು. ನಂತರ ಭಾಜಾ ಭಜಂತ್ರಿ ಸೌಂಡಿನೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿದರು.

ಈ ವೇಳೆ ದೈವಸ್ಥರಾದ ರಾಯದುರ್ಗದ ದುರುಗಪ್ಪ ಮಾತನಾಡಿ, ಕಳೆದ 30 ದಿನಗಳಿಂದ ಮಳೆಯಾಗದೆ ರೈತರಿಗೆ ತುಂಬಾ ತೊಂದರೆಯಾಗಿದೆ. ಈಗಾಗಲೇ ನಾವು ಹೊಲವನ್ನು ಸ್ವಚ್ಛಗೊಳಿಸಿ ಬಿತ್ತಲು ತಯಾರು ಮಾಡಿದ್ದೇವೆ. ಆದರೆ ಮಳೆ ಇಲ್ಲ. ಕಳೆದ ವರ್ಷ ಮೇ ತಿಂಗಳಲ್ಲೇ ಚೆನ್ನಾಗಿ ಮಳೆಯಾಗಿತ್ತು. ಈ ಬಾರಿ ಮಳೆಯಾಗಿಲ್ಲ. ಆದ್ದರಿಂದ ದೈವಸ್ಥರೆಲ್ಲ ಸೇರಿ ಕತ್ತೆಗಳ ಮದುವೆ ಮಾಡಿಸಿದರೆ ಮಳೆ ಬರುತ್ತದೆ ಎಂಬ ಭಾವನೆಯಿಂದ ಶಾಸ್ತ್ರೋಕ್ತವಾಗಿ ಕತ್ತೆಗಳ ಮದುವೆ ಮಾಡಿಸಿ, ಊರ ತುಂಬಾ ಮೆರವಣಿಗೆ ಮಾಡಿಸಿ, ಊರಿನ ಪ್ರಮುಖ ದೇವ ಸ್ಥಾನಗಳಿಗೆ ಪೂಜೆ ಮಾಡಿಸಲಾಗಿದೆ ಎಂದರು.



ಹರಪನಹಳ್ಳಿ

ಈ ಸಂದರ್ಭದಲ್ಲಿ ದೈವಸ್ಥರಾದ ನಿಟ್ಟೂರು ದೊಡ್ಡಹಾಲಪ್ಪ, ಕೆ. ಅಂಜಿನಪ್ಪ, ಎಂ. ಉಚ್ಚಂಗೆಪ್ಪ, ಆಳರಪ್ಪರ ಹಾಲಪ್ಪ, ಅರಸಿಕೆರೆ ನಾಗೇಂದ್ರ, ವರಕೇರಿ ಉಚ್ಚಂಗೆಪ್ಪ, ರಾಯದುರ್ಗದ ಕರಿಬಸಪ್ಪ, ತಲವಾಗಲು ಹಾಲೇಶ, ಮೆಂಗಳಪ್ಪರ ಸುರೇಶ, ರಾವನಿ ಬಸವರಾಜ, ರಾಯದುರ್ಗದ ಕರಿಯ, ಹನುಮಂತಪ್ಪ, ಗಿಡ್ಡಳ್ಳಿ ಹನುಮಂತ, ಮ್ಯಾಕಿ ಬಿದ್ದಪ್ಪ, ಗಿಡ್ಡ ಮಂಜ, ಗಿಡ್ಡಳ್ಳಿ ಪರಸಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಪಿಎಸ್‌ಐ ಆದ ಪುತ್ರಿಗೆ ತಂದೆಯಿಂದಲೇ ಅಧಿಕಾರ ಹಸ್ತಾಂತರ

ಮಂಡ್ಯ, ಜೂ. 21 - ತಂದೆ ತಾನು ಕರ್ತವ್ಯ ನಿರ್ವಹಿಸುತ್ತಿದ್ದ ಠಾಣೆಗೇ ಪಿಎಸ್‌ಐ ಆಗಿ ನೇಮಕಗೊಂಡ ಮಗಳಿಗೆ ಹೂಗುಚ್ಛ ನೀಡಿ ಅಧಿಕಾರ ಹಸ್ತಾಂತರಿಸಿದ್ದು, ತಂದೆಯಿಂದಲೇ ಅಧಿಕಾರ ಸ್ವೀಕರಿಸಿದ ಅಪರೂಪದ ಸನ್ನಿವೇಶ ನಗರದ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ನಿನ್ನೆ ನಡೆಯಿತು.

ಸಬ್ ಇನ್‌ಸ್ಪೆಕ್ಟರ್ ಆಗಿದ್ದ ತಂದೆ ವರ್ಗಾವಣೆಯಾಗಿ ತೆರಳುವಾಗ ತಮ್ಮ ಹುದ್ದೆಯ ಉಸ್ತುವಾರಿಯನ್ನು ತಮ್ಮ ಪುತ್ರಿಗೆ ವಹಿಸಿದರು. ಮಗಳಿಗೆ ಹೂಗುಚ್ಛ ನೀಡಿ ಸೀಟ್‌ನಲ್ಲಿ ಕೂರಿಸಿದರು. ಈ ಸಂದರ್ಭದಲ್ಲಿ ಅಪ್ಪ–ಮಗಳು ಇಬ್ಬರೂ ಭಾವುಕರಾದರು. ಈ ಭಾವನಾತ್ಮಕ ಸನ್ನಿವೇಶಕ್ಕೆ ಪೊಲೀಸ್ ಠಾಣೆಯ ಸಿಬ್ಬಂದಿಗಳು ಸಾಕ್ಷಿಯಾದರು.

ಸಬ್ ಇನ್‌ಸ್ಪೆಕ್ಟರ್ ಆಗಿದ್ದ ಬಿ.ಎಸ್.ವೆಂಕಟೇಶ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ವರ್ಗಾವಣೆಗೊಂಡಿದ್ದು, ಆ ಸ್ಥಾನಕ್ಕೆ ವೆಂಕಟೇಶ್ ಅವರ ಪುತ್ರಿ ಬಿ.ವಿ. ವರ್ಷಾ ನೇಮಕಗೊಂಡಿದ್ದಾರೆ. ವೆಂಕಟೇಶ್ ಅವರು ತಮ್ಮ ಪುತ್ರಿಗೆ ಅಧಿಕಾರ ಹಸ್ತಾಂತರ ಮಾಡಿದರು.



ಪಿಎಸ್‌ಐ ಪರೀಕ್ಷೆಯಲ್ಲಿ ತೇರ್ಗಡೆಗೊಂಡ 2022ರ ಬ್ಯಾಚ್‌ನಲ್ಲಿ ಪಿಎಸ್‌ಐ ಆಗಿರುವ ವರ್ಷಾ ಅವರು, ಗುಲ್ಬರ್ಗಾದಲ್ಲಿ ತರಬೇತಿ ಮುಗಿಸಿ, ಮಂಡ್ಯದಲ್ಲೇ 1 ವರ್ಷ ಪ್ರೊಬೇಷನರಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಈಗ ಅವರ ಮೊದಲ ನೇಮಕ ಕೂಡ ಮಂಡ್ಯದಲ್ಲೇ ಆಗಿದೆ. ಇವರು ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ.

ಸುಮಾರು 16 ವರ್ಷಗಳ ಕಾಲ ಮಿಲಿಟರಿಯಲ್ಲಿ ಸೇವೆ ಸಲ್ಲಿಸಿರುವ ವೆಂಕಟೇಶ್ ಪಾಕಿಸ್ತಾನ, ಚೈನಾ, ಬಾಂಗ್ಲಾ ದೇಶದ ಗಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಜತೆಗೆ ಕಾರ್ಗಿಲ್ ಯುದ್ಧದಲ್ಲೂ ಭಾಗಿಯಾಗಿದ್ದ ಹೆಗ್ಗಳಿಕೆ ಇದೆ. ಮಿಲಿಟರಿ ಸೇವೆಯಿಂದ ನಿವೃತ್ತರಾದ ಬಳಿಕ ಪಿಎಸ್‌ಐ ಪರೀಕ್ಷೆ ಪಡೆದು ಮಿಲಿಟರಿ ಕೋಟಾದಡಿ 2021ರ ಬ್ಯಾಚ್‌ನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ 2ನೇ ವೃತ್ತಿ ಜೀವನ ಆರಂಭಿಸಿದ್ದರು.

ವೆಂಕಟೇಶ್ ಅವರು, ಮಂಡ್ಯ, ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ಹಲವೆಡೆ ಕರ್ತವ್ಯ ನಿರ್ವಹಿಸಿ, ಮಂಡ್ಯ ಸೆಂಟ್ರಲ್ ಠಾಣೆಗೆ ಒಂದೂವರೆ ವರ್ಷದ ಹಿಂದೆ ವರ್ಗಾವಣೆಯಾಗಿ ಬಂದಿದ್ದರು.

ಮಕ್ಕಳು ಚೆನ್ನಾಗಿ ಓದಿ ಉನ್ನತ ಹುದ್ದೆಗೆ ಏರಬೇಕು ಎಂಬ ಕನಸು ತಂದೆ–ತಾಯಿಗೆ ಇರುತ್ತದೆ. ಅದನ್ನು ಮಕ್ಕಳು ಸಾಧಿಸಿ ತೋರಿಸಿದಾಗ ಪೋಷಕರಿಗೆ ಆಗುವ ಸಂತಸವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ ಎಂದು ವೆಂಕಟೇಶ್ ಹೇಳುವಾಗ ಭಾವುಕರಾದರು. ತಂದೆ ಬಾಲ್ಯದಿಂದಲೂ ನನ್ನೆಲ್ಲಾ ಹೆಜ್ಜೆಗಳಿಗೆ ಬೆನ್ನೆಲುಬಾಗಿ ನಿಂತಿದ್ದರು. ಈಗ ಅವರಿಂದಲೇ ಅಧಿಕಾರ ಪಡೆಯುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ ಎಂದು ಬಿ.ವಿ.ವರ್ಷಾ ಸಂತಸ ವ್ಯಕ್ತಪಡಿಸಿದರು.

# ಗೃಹಲಕ್ಷ್ಮಿ ಅರ್ಜಿ ದಾಖಲಿಸಲು ಆ್ಯಪ್

ಬೆಂಗಳೂರು, ಜೂ. 21 - ಗೃಹಲಕ್ಷ್ಮಿ ಯೋಜನೆಯಡಿ ಮನೆಯೊಡತಿಗೆ ಮಾಸಿಕ 2000 ರೂ ಪಡೆಯಲು ಜೂನ್ 26ರಿಂದ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ಮಾಡಿಕೊಡುತ್ತಿದೆ. ಯೋಜನೆಯಡಿ ಫಲಾನುಭವಿಗಳು ಅರ್ಜಿ ಸಲ್ಲಿಸಲು ಆ್ಯಪ್ ಸಿದ್ಧಪಡಿಸಿದ್ದು, ಕುಟುಂಬದ ಯಜಮಾನಿ ಮನೆಯಲ್ಲೇ ಕುಳಿತು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಹಿರಿಯ ಅಧಿಕಾರಿ ಪೊನ್ನುರಾಜ್ ಅವರು ಆ್ಯಪ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಪ್ರತಿ ನಿತ್ಯ ಒಂದರಿಂದ ಒಂದೂವರೆ ಲಕ್ಷ ಅರ್ಜಿಗಳು ಸ್ವೀಕರಿಸುವ ಸಾಮರ್ಥ್ಯವನ್ನು ಈ ಆ್ಯಪ್ ಹೊಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಪ್ರಕಟಿಸಿರುವಂತೆ ಈ ಯೋಜನೆ ಆಗಸ್ಟ್ ತಿಂಗಳಿನಿಂದ ಜಾರಿಗೆ ಬರಲಿದೆ. ಈ ಯೋಜನೆಯಡಿ 1.27 ಕೋಟಿ ಕುಟುಂಬಗಳಿಗೆ ಪ್ರಯೋಜನ ದೊರೆಯಲಿದ್ದು, ಇದಕ್ಕಾಗಿ ವಾರ್ಷಿಕ 30 ಸಾವಿರ ಕೋಟಿ ರೂ. ಹೆಚ್ಚಿನ ಹೊರೆ ಸರ್ಕಾರಕ್ಕಾಗಲಿದೆ.

ಯೋಜನೆಗೆ ಅಗತ್ಯವಿರುವ ಮೊದಲ ಕಂತಿನ ಹಣವನ್ನು ಸರ್ಕಾರ ಮೀಸಲಿಟ್ಟಿದ್ದು, ಫಲಾನುಭವಿಗಳು ಸಲ್ಲಿಸುವ ಮಾಹಿತಿ ಮತ್ತು ದಾಖಲೆ ನೈಜವಾಗಿದ್ದರೆ ಅಂಥವರಿಗೆ ಆಗಸ್ಟ್ ತಿಂಗಳಲ್ಲೇ ಎರಡು ಸಾವಿರ ದೊರೆಯಲು ಪ್ರಾರಂಭವಾಗುತ್ತದೆ.

ಆದಾಯ ತೆರಿಗೆ ಮತ್ತು ಜಿಎಸ್‌ಟಿ ಪಾವತಿ ಮಾಡುವವರನ್ನು ಈ ಯೋಜನೆ ಯಿಂದ ಹೊರಗಿಟ್ಟಿರುವ ಸರ್ಕಾರ, ಉಳಿದಂತೆ ಎಪಿಎಲ್, ಬಿಪಿಎಲ್ ಎನ್ನದೇ, ಎಲ್ಲಾ ಒಡತಿಯರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಬ್ಯಾಂಕ್ ಖಾತೆ ಹಾಗೂ ಆಧಾರ್ ಸಂಖ್ಯೆ ಹೊಂದಾಣಿಕೆ ಮಾಡಬೇಕು. ಜೊತೆಗೆ ಪಡಿತರ ಚೀಟಿಯನ್ನೂ ಹೊಂದಿರಬೇಕು.

ಪತಿಯ ಆಧಾರ್ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನ ಇರುವುದಿಲ್ಲ. ಹಾಗಾಗಿ ಎಲ್ಲರೂ ಏಕಕಾಲಕ್ಕೆ ಅರ್ಜಿ ಸಲ್ಲಿಸಲು ಮುಗಿ ಬೀಳುವುದಿಲ್ಲ.

ನಗರ ಪ್ರದೇಶ ಮತ್ತು ಅಕ್ಷರಸ್ಥರು ಫೋನ್ ಇಲ್ಲವೇ ಕಂಪ್ಯೂಟರ್ ಮೂಲಕ ಅರ್ಜಿ ಸಲ್ಲಿಸಬಹುದು. ಅನಕ್ಷರಸ್ಥರು ಮತ್ತು ಗ್ರಾಮೀಣ ಪ್ರದೇಶದವರಿಗೆ ಅರ್ಜಿ ಸಲ್ಲಿಸಲು ತೊಂದರೆಯಾಗುವುದನ್ನು ತಪ್ಪಿಸಲು 'ಜನಸೇವಕ'ರನ್ನು ಸರ್ಕಾರ ನೇಮಿಸುತ್ತಿದೆ. ಪ್ರತಿ ಪಂಚಾಯ್ತಿಗೆ 5 ಜನ ಸೇವಕರಿದ್ದು, ಅವರು ಆ ಪ್ರದೇಶ ವ್ಯಾಪ್ತಿಯ ಗ್ರಾಮಗಳ ಪ್ರತಿ ಮನೆಗೆ ತೆರಳಿ ಮನೆಯೊಡತಿ ಗುರುತಿಸಿ, ಅವರಿಂದ ದಾಖಲೆಗಳನ್ನು ಪಡೆದು ಅಲ್ಲಿಯೇ ಗೃಹಲಕ್ಷ್ಮಿ ಯೋಜನೆಗೆ ಅಪ್‌ಲೋಡ್ ಮಾಡಲಿದ್ದಾರೆ.

ಗ್ರಾಮೀಣ ಭಾಗದವರು ಆತಂಕ ಪಡುವ ಅಗತ್ಯವಿಲ್ಲ. ಮನೆಯ ಬಾಗಿಲಲ್ಲೇ ಈ ಸೇವೆ ಪಡೆದುಕೊಂಡು ಎರಡು ಸಾವಿರ ರೂ. ಮಾಸಿಕ ಪಡೆಯಬಹುದು.

ಕಳೆದ ಶುಕ್ರವಾರವೇ ಈ ಯೋಜನೆಗೆ ಚಾಲನೆ ನೀಡಬೇಕಿತ್ತು. ಆದರೆ, ಅರ್ಜಿ ಸಲ್ಲಿಸಲು ಏಕ ಕಾಲಕ್ಕೆ ಮುಂದಾಗುವುದರಿಂದ ತೊಂದರೆ ಉಂಟಾಗಿ ಸರ್ಕಾರದ ವಿರುದ್ಧ ಮುಗಿ ಬೀಳುತ್ತಾರೆ.

ಇದನ್ನು ಗಮನದಲ್ಲಿರಿಸಿಕೊಂಡು ನಡೆದ ಸಂಪುಟ ಸಭೆಯು ಯೋಜನೆ ಅನುಷ್ಠಾನ ಎರಡು ದಿನ ವಿಳಂಬವಾದರೂ ಸರಿ. ಪ್ರತ್ಯೇಕ ಆ್ಯಪ್ ಅಭಿವೃದ್ಧಿ ಪಡಿಸಿ ಅದರ ಮೂಲಕ ಅರ್ಜಿ ಸಲ್ಲಿಸಲು ಸರ್ಕಾರ ತೀರ್ಮಾನಿಸಿತ್ತು. ಅದರಂತೆ ಹೊಸ ಆ್ಯಪ್ ಸಿದ್ಧಪಡಿಸುವುದು ಹಾಗೂ ಯೋಜನೆ ಅನುಷ್ಠಾನದ ಹೊಣೆಯನ್ನು ಪೊನ್ನುರಾಜ್ ಅವರಿಗೆ ವಹಿಸಲಾಗಿತ್ತು.

## 5 ಸಾವಿರ ಅಡಿಕೆ ಸಸಿಗಳು ನಾಶ

ದಾವಣಗೆರೆ, ಜು. 21- ಸಂತೇಬೆನ್ನೂರು ತಾಲ್ಲೂಕು ದೊಡ್ಡಬ್ಬಿಗೆರೆ ಜಮೀನಿನಲ್ಲಿದ್ದ 5 ಸಾವಿರ ಅಡಿಕೆ ಸಸಿಗಳನ್ನು ಕಿತ್ತು ನಾಶ ಮಾಡಿರುವ ಘಟನೆ ಸೋಮವಾರ ನಡೆದಿದೆ. ಹರೀಶ್ ಜೆ.ಟಿ. ಎಂಬುವವರಿಗೆ ಸೇರಿದ 1.25 ಲಕ್ಷ ರೂ. ಮೌಲ್ಯದ ಅಡಿಕೆ ಸಸಿಗಳನ್ನು ದುಷ್ಕರ್ಮಿಗಳು ನಾಶ ಪಡಿಸಿದ್ದಾರೆ. ಈ ಕುರಿತು ಸಂತೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

# ಹರಿಹರ ನಗರಸಭೆ ಅಧ್ಯಕ್ಷರಾಗಿ ನಿಂಬಕ್ಕ ಆಯ್ಕೆ ಸಾಧ್ಯತೆ



ಹರಿಹರ, ಜೂ.21 - ನಗರಸಭೆ ಅಧ್ಯಕ್ಷರಾಗಿದ್ದ ಶಾಹೀನಾಬಾನು ದಾದಾಪೀರ್ ನೀಡಿರುವ ರಾಜೀನಾಮೆ ಅಂಗೀಕಾರ ಆಗಿದ್ದು, ಮುಂದಿನ ಅವಧಿಗೆ ಅಧ್ಯಕ್ಷರಾಗಿ ಜೆಡಿಎಸ್‌ನ ನಿಂಬಕ್ಕ ಚಂದಪೂರ್ ಮತ್ತು ಉಪಾಧ್ಯಕ್ಷರಾಗಿ ಕಾಂಗ್ರೆಸ್‌ನ ಕೆ.ಜಿ. ಸಿದ್ದೇಶ್ ಆಯ್ಕೆಯಾಗುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ.

ನಗರಸಭೆಯ ಸದಸ್ಯರಾಗಿ ಜೆಡಿಎಸ್ ಪಕ್ಷದಿಂದ 15, ಕಾಂಗ್ರೆಸ್ ಪಕ್ಷದಿಂದ 10, ಬಿಜೆಪಿ ಪಕ್ಷದಿಂದ 4 ಮತ್ತು ಪಕ್ಷೇತರರು 2 ಸೇರಿದಂತೆ ಒಟ್ಟು 31 ಸದಸ್ಯರು ಆಯ್ಕೆಯಾಗಿದ್ದಾರೆ. ಸ್ಪಷ್ಟ ಬಹುಮತವಿಲ್ಲದ ಕಾರಣ ಜೆಡಿಎಸ್ ಹಾಗೂ ಕಾಂಗ್ರೆಸ್ ಅಧಿಕಾರ ಹಂಚಿಕೆ ಮಾಡಿಕೊಂಡಿವೆ.

ಕಳೆದ ಜೂ. 5 ರಂದು ಶಾಹೀನಾಬಾನು ರಾಜೀನಾಮೆ ನೀಡಿದ್ದು, ಅದು ಜೂ.16ರಂದು ಅಂಗೀಕಾರವಾಗಿದೆ. ಮುಂದಿನ ಅವಧಿಗೆ ಚುನಾವಣಾ ದಿನಾಂಕವನ್ನು ಜಿಲ್ಲಾಧಿಕಾರಿಗಳು ಘೋಷಣೆ ಮಾಡಬೇಕಿದೆ.ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಪಕ್ಷದ ಕವಿತಾ ಮಾರುತಿ, ಉಷಾ ಮಂಜುನಾಥ್, ಲಕ್ಷ್ಮಿ ಮೋಹನ್, ನಿಂಬಕ್ಕ ಚಂದಪೂರ್ ಪೈಪೋಟಿ ನಡೆಸುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದಿಂದ ಉಪಾಧ್ಯಕ್ಷ ಸ್ಥಾನಕ್ಕೆ ನಾಗರತ್ನ ಅಥವಾ ಕೆ.ಜಿ. ಸಿದ್ದೇಶ್ ಹೆಸರು ಬಹಳ ಚಾಲ್ತಿಯಲ್ಲಿದ್ದವು. ಆದರೆ ನಾಗರತ್ನಮ್ಮನವರು ಲೋಕಾಯುಕ್ತ ಪ್ರಕರಣದಲ್ಲಿ ಸಿಲುಕಿದ್ದರಿಂದ 8 ನೇ ವಾರ್ಡಿನ ಸಿದ್ದೇಶ್ ಅವರ ಹೆಸರು ಅಂತಿಮ ಆಗಬಹುದಾಗಿದೆ. ಕೊನೆಯ ಗಳಿಗೆಯಲ್ಲಿ ಯಾವುದೇ ಬದಲಾವಣೆ ಆಗದಿದ್ದರೆ, ನಿಂಬಕ್ಕ ಹಾಗೂ ಸಿದ್ದೇಶ್ ನಗರಸಭೆ ಗಾದಿಗೆ ಬರಲಿದ್ದಾರೆ.

# ನಗರಕ್ಕೆ ಇಂದು ಮಾಜಿ ಸಿಎಂ ಯಡಿಯೂರಪ್ಪ



ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಶ್ರೀ ಅಭಿನವ ರೇಣುಕಾ ಮಂದಿರದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಕರೆಯಲಾಗಿದೆ. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಅನಗವಾಡಿ ವಹಿಸಲಿದ್ದಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ತಿಳಿಸಿದ್ದಾರೆ.

ಬಿ.ಎಸ್. ಯಡಿಯೂರಪ್ಪ, ಗೋವಿಂದ ಕಾರಜೋಳ, ಸಂಸದ ಜಿ.ಎಂ ಸಿದ್ದೇಶ್ವರ, ಶಾಸಕ ಬಿ.ಪಿ.ಹರೀಶ್, ಎಸ್.ಎ. ರವೀಂದ್ರನಾಥ್, ಎಂ.ಪಿ ರೇಣುಕಾಚಾರ್ಯ, ಕರುಣಾಕರ ರೆಡ್ಡಿ, ಎಸ್.ವಿ. ರಾಮಚಂದ್ರಪ್ಪ ಪ್ರೊ.ಲಿಂಗಪ್ಪ, ಮಾಜಿ ಮುಖ್ಯ ಸಚೇತಕ ಎ.ಹೆಚ್. ಶಿವಯೋಗಿಸ್ವಾಮಿ, ರಾಜ್ಯ ಕಾರ್ಯದರ್ಶಿ ಸುಧಾ ಜಯ ರುದ್ರೇಶ್ ಭಾಗವಹಿಸಲಿದ್ದಾರೆ.


# ರಾಷ್ಟ್ರಪತಿ ಭೇಟಿ ಮಾಡಿದ ಸಿದ್ದರಾಮಯ್ಯ

ನವದೆಹಲಿ, ಜೂ. 21 – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಭವನದಲ್ಲಿ ಭೇಟಿ ಮಾಡಿದ್ದಾರೆ. ನಂತರ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನೂ ಭೇಟಿ ಮಾಡಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ರಾಜಧಾನಿಗೆ ಬಂದಿದ್ದರು.

ಇದು ಸೌಜನ್ಯದ ಭೇಟಿ. ಅಮಿತ್ ಷಾ ಭೇಟಿ ಮಾಡಿದಾಗ ಅಕ್ಕಿ ವಿಷಯವನ್ನೂ ಪ್ರಸ್ತಾಪಿಸಲಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.




## ಯೋಗಾರೂಢರಾದ ರಂಭಾಪುರಿ ಶ್ರೀಗಳು



ಅಂತರರಾಷ್ಟ್ರೀಯ ಯೋಗ ದಿನಾಚರಣೆಯಂದು ಗೋಕಾಕ್ ನಗರದಲ್ಲಿ ಯೋಗಾರೂಢರಾದ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ವೀರಸೋಮೇಶ್ವರ ಶಿವಾಚಾರ್ಯ ಜಗದ್ಗುರುಗಳು.

## ಕುವೆಂಪು ವಿವಿ ಸಿಂಡಿಕೇಟ್ ಸದಸ್ಯರಾಗಿ ಶಾಂತಕುಮಾರ್



ದಾವಣಗೆರೆ, ಜೂ. 21- ಕುವೆಂಪು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರನ್ನಾಗಿ ನಗರದ ಜಿ.ಎಸ್. ಶಾಂತಕುಮಾರ್ ಅವರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡಿದ್ದಾರೆ.

## ಟಿಪ್ಪರ್ ಲಾರಿ ಹರಿದು ಬಾಲಕಿ ಸಾವು



ದಾವಣಗೆರೆ, ಜೂ. 21 - ರಸ್ತೆ ಅಪಘಾತದಲ್ಲಿ ಎರಡು ವರ್ಷದ ಬಾಲಕಿ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಹಳೇ ಕುಂದುವಾಡದಲ್ಲಿ ನಡೆದಿದೆ. ಕುಂದುವಾಡ ಗ್ರಾಮದ ಗಣೇಶ್ ಪುತ್ರಿ ಚರಸ್ವಿ ಸಾವಿಗೀಡಾದ ನತದೃಷ್ಟೆ.

ಅಂಗನವಾಡಿ ಮುಗಿಸಿ ಮಧ್ಯಾಹ್ನ ತನ್ನ ಅಜ್ಜಿಯೊಂದಿಗೆ ಮನೆಗೆ ಬರುತ್ತಿದ್ದ ಬಾಲಕಿ ಮೇಲೆ ಕೆಎ 17 ಡಿ 5017 ಸಂಖ್ಯೆಯ ಟಿಪ್ಪರ್ ಲಾರಿ ಹರಿದಿದೆ. ಚಕ್ರ ತಲೆ ಮೇಲೆ ಹರಿದ ರಭಸಕ್ಕೆ ಬಾಲಕಿ ತೀವ್ರವಾಗಿ ಗಾಯ ಗೊಂಡು ಮೃತಪಟ್ಟಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಅಜಾಗರೂಕತೆಯಿಂದ ಲಾರಿ ಚಾಲನೆ ಮಾಡಿದ ಪರಿಣಾಮ ಬಾಲಕಿ ಜೀವ ಬಲಿಯಾಗಿದೆ. ಬಾಲಕಿಯ ಸ್ಥಿತಿ ಕಂಡು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಘಟನೆಯನ್ನು ಖಂಡಿಸಿ ಗ್ರಾಮಸ್ಥರು ಕೆಲ ಕಾಲ ರಸ್ತೆ ಬಂದ್ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಘಟನೆ ನಡೆಯುತ್ತಿದ್ದಂತೆ ಲಾರಿ ಚಾಲಕ ಲಾರಿ ಬಿಟ್ಟು ಪರಾರಿಯಾಗಿದ್ದಾನೆ. ಸ್ಥಳಕ್ಕೆ ದಕ್ಷಿಣ ಸಂಚಾರಿ ಠಾಣೆ, ವಿದ್ಯಾನಗರ ಪೊಲೀಸರು ಭೇಟಿ ನೀಡಿದ್ದರು.

